KAVP210032222022

Presented on : 30-07-2022
Registered on : 01-08-2022
Decided on : 27-06-2026

**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ**,**
ಬಸವನ ಬಾಗೇವಾಡಿ **.**
ಉಪಸ್ಥಿತರು

ಶ್ರೀ ಈರಪ್ಪ ಢವಳೇಶ್ವರ್ ಬಿ.ಎ.**,** ಎಲ್‌ಎಲ್‌ಬಿ.**,**
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**,**
ಬಸವನ ಬಾಗೇವಾಡಿ

ಅಸಲು ದಾವಾ ಸಂಖ್ಯೆ: **332 /2022**

ದಿನಾಂಕ: **27** ನೇ ಜೂನ **2026**

ವಾದಿ**:**

1) ಶಂಕರ ತಂದೆ ಭೀಮಶಿ ಬಜಂತ್ರಿ,
ವಯಸ್ಸು: 31 ವರ್ಷ,ಉ:ಒಕ್ಕಲುತನ
ಸಾ: ಇಂದಿರಾನಗರ, ಬಾಗೇವಾಡಿ.
ಜಿ: ವಿಜಯಪೂರ

**(** ಪ್ರತಿನಿಧಿಸುವವರು: ಶ್ರೀ ಎಂ**..**ಹೆಚ್**.**ಕೆ **,** ನ್ಯಾಯವಾದಿಗಳು**)**

- ವಿರುದ್ಧ-

ಪ್ರತಿವಾದಿಯರು:

1. ಶ್ರೀಶೈಲ ತಂದೆ ಸೋಮಪ್ಪ ಮಾಲಗಾರ ,

ವಯಾ: 51 ವರ್ಷ, ಉ: ಒಕ್ಕಲುತನ

ಸಾ: ಇಂದಿರಾನಗರ, ಬಾಗೇವಾಡಿ

2. ರಮೇಶ ತಂದೆ ಮಲ್ಲಪ್ಪ ಚಿಂಚೋಳಿ
ವಯಾಃ 42 ವರ್ಷ, ಉಃ ಒಕ್ಕಲುತನ
ಸಾಃ ಮಹರಾಜ ಮಠದ ಹತ್ತಿರ ಬಸವನ ಬಾಗೇವಾಡಿ

**(1** ನೇ ಪ್ರತಿವಾದಿಯರ ಪರ ಪ್ರತಿನಿಧಿಸುವವರುಃ ಶ್ರೀ ವಿ**.**ಬಿ**.** ಡಿ**.,** ನ್ಯಾಯವಾದಿಗಳು**)**
**(2** ನೇ ಪ್ರತಿವಾದಿಯರ ಪರ ಪ್ರತಿನಿಧಿಸುವವರುಃ ಶ್ರೀ ಎಸ್**.**ಜಿ**.**ಬಿ**.,** ನ್ಯಾಯವಾದಿಗಳು**)**

| | | | | |
|---|---|---|---|---|
| 1 | ದಾವಾ ದಾಖಲಿಸಿದ ದಿನಾಂಕ | 01.08.2022 | | |
| 2 | ದಾವಾ ಸ್ವರೂಪ | ನಿರ್ಧಿಷ್ಟ ಕರಾರು ನೆರವೇರಿಕೆಗಾಗಿ, ಸ್ವಾಧೀನತೆ ಹಾಗೂ ಮುಂಗಡ ಹಣದ ಮರುಪಾವತಿಗಾಗಿ | | |
| 3 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 21-11-2025 | | |
| 4 | ತೀರ್ಪನ್ನು ಉದ್ಘೋಷಿಸಿದ ದಿನಾಂಕ | 27-06-2026 | | |
| 5 | ತೆಗೆದುಕೊಂಡ ಅವಧಿ | ವರ್ಷ | ತಿಂಗಳು | ದಿನಗಳು |
| | | **03** | **10** | **26** |

-ಃ ತೀರ್ಪು ಃ-

ವಾದಿಯು ಪ್ರಸ್ತುತ ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಿಃ25.01.2021 ರ ಕ್ರಯದ ಕರಾರಿನ ಅನುಗುಣವಾಗಿ ಕ್ರಯಪತ್ರವನ್ನು ಮಾಡಿಕೊಡಲು, ದಾವಾ ಆಸ್ತಿಯ ಸ್ವಾಧೀನತೆ ಮತ್ತು ಪರ್ಯಾಯವಾಗಿ ರೂಃ 3,00,000/- ಮುಂಗಡ ಹಣವನ್ನು ಶೇಕಡಾ 18% ರಷ್ಟು ಬಡ್ಡಿಯೊಂದಿಗೆ 1 ನೇ ಪ್ರತಿವಾದಿಯು ವಾದಿಗೆ ಮರುಪಾವತಿಸುವಂತೆ ನಿರ್ದೇಶಿಸಬೇಕೆಂದು ಪರಿಹಾರಗಳನ್ನು ಕೋರಿ ಸಲ್ಲಿಸಿರುತ್ತಾರೆ.

**2**. ವಾದಪತ್ರದ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತೆ ಇದೆಃ-

ದಾವಾ ಅನುಸೂಚಿ ಸರ್ವೆ ನಂಃ 141/3 ಕ್ಷೇತ್ರ 31 ಗುಂಟೆ ಸ್ವತ್ತಿಗೆ 1 ನೇ ಪ್ರತಿವಾದಿ ನಿರುಪಾಧಿಕ ಮಾಲೀಕತ್ವವನ್ನು ಹೊಂದಿ ಸ್ವಾಧೀನಾನುಭವದಲ್ಲಿದ್ದರು. ಸದರಿ ಆಸ್ತಿಯ

ಪೈಕಿ ಪಶ್ಚಿಮದ 5 ಗುಂಟೆ ಜಮೀನಿನ ಕುರಿತು 1 ನೇ ಪ್ರತಿವಾದಿಯು ದಿನಾಂಕ 25.01.2021 ರಂದು ವಾದಿಗೆ ರೂ.5,00,000/- ಗೆ ದಾವಾ ಆಸ್ತಿಯನ್ನು ಮಾರಾಟ ಮಾಡಲು ಕರಾರು ಒಪ್ಪಂದ ಮಾಡಿಕೊಂಡು, ಸದರಿ ಕ್ರಯದ ಕರಾರಿನ ಪ್ರಕಾರ ವಾದಿಯು ರೂ.3,00,000/- ಹಣವನ್ನು 1 ನೇ ಪ್ರತಿವಾದಿಗೆ ನೀಡಿ ಸದರಿ ಕ್ರಯ ಕರಾರು ಪತ್ರವನ್ನು ಅದೇ ದಿನ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ 1 ನೇ ಪ್ರತಿವಾದಿಯು ನೊಂದಣಿ ಮಾಡಿ ಕೊಟ್ಟಿರುತ್ತಾರೆ. ಸದರಿ ಕ್ರಯ ಕರಾರು ಪತ್ರದ ಪ್ರಕಾರ 1 ನೇ ಪ್ರತಿವಾದಿಯು ವಾದಿಗೆ ಕ್ರಯ ಪತ್ರವನ್ನು ಮೂರು ವರ್ಷಗಳೊಳಗೆ ಮಾಡಿಕೊಡಬೇಕು ಹಾಗೂ 1 ನೇ ಪ್ರತಿವಾದಿಗೆ ಹಣದ ಅವಶ್ಯಕತೆ ಇದ್ದಾಗ ಉಳಿದ ಹಣವನ್ನು ಪಡೆದು ವಾದಿಯ ಪರವಾಗಿ ಕ್ರಯ ಪತ್ರವನ್ನು ಬರೆದುಕೊಡಲು ಷರತ್ತುಗಳು ಇರುತ್ತದೆ. ಹೀಗಿದಾಗ್ಯೂ ಸಹ 1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ದಿನಾಂಕ 07.04.2022 ರಂದು 2 ನೇ ಪ್ರತಿವಾದಿಗೆ ನೊಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ಹಾಗಾಗಿ 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ಪರವಾಗಿ ಜಾರಿ ಮಾಡಿ ಕೊಟ್ಟಿರುವ ಕ್ರಯ ಪತ್ರವು ಕಾನೂನು ಬಾಹಿರ ಮತ್ತು ನಾಮಕವಾಸ್ಥೆಯ ಕ್ರಯ ಪತ್ರವಾಗಿರುವುದರಿಂದ ಸದರಿ ಕ್ರಯ ಪತ್ರವು ವಾದಿಗೆ ಬಂಧನಕಾರಕವಾಗಿರುವುದಿಲ್ಲ. 1 ನೇ ಪ್ರತಿವಾದಿಯು ದಾವಾ ಆಸ್ತಿಯ ಕುರಿತು ವಾದಿಯ ಪರವಾಗಿ ಕ್ರಯ ಕರಾರು ಪತ್ರವನ್ನು ದಿನಾಕ: 25.01.2021 ರಂದು ಮಾಡಿಕೊಟ್ಟಿರುವ ವಿಷಯವು 2 ನೇ ಪ್ರತಿವಾದಿಗೆ ಗೊತ್ತಿದ್ದರೂ ಕೂಡ ದಾವಾ ಆಸ್ತಿ ಸರ್ವೆ ನಂ: 141/3 ಕ್ಷೇತ್ರ 31 ಗುಂಟೆ ಜಮೀನನ್ನು 2 ನೇ ಪ್ರತಿವಾದಿಯು ಖರೀದಿಸಿರುತ್ತಾರೆ. ಹಾಗಾಗಿ 2 ನೇ ಪ್ರತಿವಾದಿಯು ದಾವಾ ಆಸ್ತಿಯ ಸದ್ಭಾವನೆಯ ಖರೀದಿದಾರನಾಗಿರುವುದಿಲ್ಲ. ಸದರಿ 2 ನೇ ಪ್ರತಿವಾದಿಗೆ ದಾವಾ ಆಸ್ತಿಯ ಮೇಲೆ ಯಾವುದೇ ರೀತಿಯ ಹಕ್ಕು ಹಾಗೂ ಅಧಿಕಾರ ಇಲ್ಲದೇ ಇದ್ದರೂ ಕೂಡ 3 ನೇ ವ್ಯಕ್ತಿಗಳಿಗೆ ಮಾರಾಟ ಮಾಡಲು ಪ್ರಯತ್ನಿಸಿರುತ್ತಾರೆ. ಅಂತಿಮವಾಗಿ ವಾದಿಯು ಪ್ರತಿವಾದಿಗಳಿಗೆ ಹಲವಾರು ಬಾರಿ ಮೌಖಿಕವಾಗಿ ಕ್ರಯಪತ್ರವನ್ನು ವಾದಿಯ ಪರವಾಗಿ ಜಾರಿಗೊಳಿಸಿಕೊಡುವಂತೆ ಕೋರಿರುತ್ತಾರೆ. ಆದರೆ, ಪ್ರತಿವಾದಿಗಳು ಕ್ರಯ ಪತ್ರವನ್ನು ಜಾರಿಗೊಳಿಸಲು ಒಪ್ಪಿರುವುದಿಲ್ಲ. ವಾದಿಯು ಕ್ರಯಪತ್ರವನ್ನು ಜಾರಿಗೊಳಿಸುವ ತನ್ನ ಪಾಲಿನ ಕರ್ತವ್ಯವನ್ನು ನೆರವೇರಿಸಲು ಸದಾಕಾಲ ಸಿದ್ದನಿರುತ್ತಾನೆ. ವಾದಿಯ

ಕರಾರಿನಲ್ಲಿನ ತನ್ನ ಪಾಲಿನ ಕರ್ತವ್ಯವನ್ನು ನೆರವೇರಿಸಲು ಯಾವುದೇ ಉಲ್ಲಂಘನೆಯನ್ನು ಮಾಡಿರುವುದಿಲ್ಲ. ಆದ್ದರಿಂದ, ಈ ದಾವೆಯಲ್ಲಿ ಕೋರಿರುವಂತೆ ವಾದಿಯು ಸಲ್ಲಿಸಿರುವ ದಾವೆಯನ್ನು ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

**3.** ಈ ದಾವೆಯನ್ನು ದಾಖಲಿಸಿಕೊಂಡ ನಂತರ ಪ್ರತಿವಾದಿಗಳಿಗೆ ದಾವಾ ಸಮನ್ಸ್ ನ್ನು ನೀಡಲಾಗಿ 1 ಮತ್ತು 2 ಪ್ರತಿವಾದಿಗಳು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ. 1 ನೇ ಪ್ರತಿವಾದಿಯು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. 2 ನೇ ಪ್ರತಿವಾದಿಯು ಈ ದಾವೆಯಲ್ಲಿ ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ . 1 ನೇ ಪ್ರತಿವಾದಿಯು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿನ ಅಂಶಗಳು ಈ ಕೆಳಕಂಡಂತೆ ಇರುತ್ತದೆ .

4. ವಾದಿಯು ವಾದ ಪತ್ರದಲ್ಲಿ ಹೇಳಿರುವ ಎಲ್ಲಾ ಅಂಶಗಳನ್ನು ನಿರ್ಧಿಷ್ಟವಾಗಿ ಅಲ್ಲಗಳೆದಿರುತ್ತಾರೆ. ದಾವಾ ಅನುಸೂಚಿ ಸ್ವತ್ತಿನ ಕುರಿತು 1 ನೇ ಪ್ರತಿವಾದಿಯು ಯಾವುದೇ ಕ್ರಯ ಕರಾರು ಪತ್ರವನ್ನು ವಾದಿಯ ಪರವಾಗಿ ಜಾರಿ ಮಾಡಿಕೊಟ್ಟಿರುವುದಿಲ್ಲ. 2021 ನೇ ಸಾಲಿನಲ್ಲಿ ಕರೋನಾ ಸಾಂಕ್ರಾಮಿಕ ರೋಗ ಇರುವುದರಿಂದ ಯಾವುದೇ ಬ್ಯಾಂಕುಗಳಿಂದ ಸಾಲ ಸಿಗದೇ ಇರುವುದರಿಂದ 1 ನೇ ಪ್ರತಿವಾದಿಯು ವಾದಿಯಿಂದ ರೂ: 40,000 ಗಳನ್ನು ಸಾಲವಾಗಿ ಪಡೆದಿದ್ದು, ಸದರಿ ಸಾಲಕ್ಕೆ ವಾದಿಯು ಪ್ರತಿ ತಿಂಗಳು ಪ್ರತಿಶತ 20% ಬಡ್ಡಿಯಂತೆ ಹಣವನ್ನು ಮರುಪಾವತಿಸುವಂತೆ ಮತ್ತು ಸದರಿ ಸಾಲದ ಭದ್ರತೆಗಾಗಿ ನಾಮಕಾವಾಸ್ಥೆಯ ಕ್ರಯ ಕರಾರು ಪತ್ರವನ್ನು ತನ್ನ ಪರವಾಗಿ ಜಾರಿ ಮಾಡಿಕೊಡುವಂತೆ 1 ನೇ ಪ್ರತಿವಾದಿಗೆ ಷರತ್ತುಗಳನ್ನು ಹಾಕಿರುತ್ತಾರೆ. ಸದರಿ 1 ನೇ ಪ್ರತಿವಾದಿಗೆ ಕರೋನಾ ಸಮಯದಲ್ಲಿ ಯಾವುದೇ ಬ್ಯಾಂಕುಗಳಿಂದ ಸಾಲ ಸಿಗದೇ ಇರುವುದರಿಂದ ವಾದಿಯ ಷರತ್ತುಗಳಿಗೆ ಒಪ್ಪಿಕೊಂಡಿರುತ್ತಾರೆ. . ವಾದಿ ಮತ್ತು 1 ನೇ ಪ್ರತಿವಾದಿಯ ನಡುವೆ ಸಾಲದ ವ್ಯವಹಾರವಾಗಿರುತ್ತದೆಯೇ ಹೊರತು ಯಾವುದೇ ಕ್ರಯ ಕರಾರು ಆಗಿರುವುದಿಲ್ಲ. ವಾದಿಯು ಕ್ರಯ ಕರಾರು ಪತ್ರವನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತಾರೆ. 1 ನೇ ಪ್ರತಿವಾದಿಯು ವಾದಿಯ ಸಮ್ಮತಿಯನ್ನು 2 ನೇ ಪ್ರತಿವಾದಿಗೆ ಕ್ರಯ ಪತ್ರವನ್ನು ಜಾರಿ ಮಾಡಿ ಕೊಡುವ ಮೊದಲು ಕೋರಿದ್ದು, ಸದರಿ ವಾದಿಯು ಮಾರಾಟದ ಹಣದಿಂದ

ತನ್ನ ಹಣ ಮತ್ತು ಬಡ್ಡಿಯನ್ನು ಮರು ಪಾವತಿಸುವಂತೆ ಕೋರಿರುತ್ತಾರೆ. 1 ನೇ ಪ್ರತಿವಾದಿಯು ದಿನಾಂಕ:07.04.2022 ರಂದು ವಾದಿಯ ಸಮ್ಮತಿಯೊಂದಿಗೆ ನೊಂದಾಯಿತ ಕ್ರಯ ಪತ್ರದ ಮೂಲಕ ದಾವಾ ಆಸ್ತಿ ಸರ್ವೆ ನಂಬರಿನ ಆಸ್ತಿಯನ್ನು ರೂ.2,00,000/- ಗಳಿಗೆ 2 ನೇ ಪ್ರತಿವಾದಿಯ ಪರವಾಗಿ ನೊಂದಾಯಿತ ಕ್ರಯ ಪತ್ರವನ್ನು ಜಾರಿ ಮಾಡಿಕೊಟ್ಟಿದ್ದು, ಸದರಿ ಕ್ರಯ ಪತ್ರವನ್ನು ಜಾರಿ ಮಾಡಿಕೊಟ್ಟಿರುವ ವಿಷಯವು ವಾದಿಗೆ ಗೊತ್ತಿರುತ್ತದೆ. ದಾವಾ ಆಸ್ತಿಯ ಖಾತೆಯು 2 ನೇ ಪ್ರತಿವಾದಿಯ ಹೆಸರಿನಲ್ಲಿ ನಮೂದು ಇರುತ್ತದೆ. 1 ನೇ ಪ್ರತಿವಾದಿಯು ವಾದಿಯ ಪರವಾಗಿ ಜಾರಿ ಮಾಡಿಕೊಟ್ಟ ಕ್ರಯ ಕರಾರು ಪತ್ರವು ಸಾಲದ ಭದ್ರತೆಗಾಗಿ ಇರುತ್ತವೆ ವಿನಹ: ದಾವಾ ಆಸ್ತಿಯ ಮಾರಾಟದ ಕರಾರು ಪತ್ರವಾಗಿರುವುದಿಲ್ಲ. 1 ನೇ ಪ್ರತಿವಾದಿಯು ವಾದಿಗೆ ರೂ:40,000/- ಹಣವನ್ನು ಸಾಮಾನ್ಯ ಬಡ್ಡಿಯೊಂದಿಗೆ ಇವತ್ತಿನವರೆಗೂ ಮರು ಪಾವತಿಸಲು ಸಿದ್ದರಿರುತ್ತಾರೆ. ವಾದಿಯು ನ್ಯಾಯಾಲಯಕ್ಕೆ ಶುದ್ಧ ಹಸ್ತದಿಂದ ಬಂದಿರುವುದಿಲ್ಲ. ವಾದಿಯು ದಾವಾ ಆಸ್ತಿಯನ್ನು ಹೊಡೆದುಕೊಳ್ಳಬೇಕೆಂಬ ದುರುದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಈ ಮೇಲಿನ ಕಾರಣಗಳಿಗಾಗಿ ವಾದಿಯು ಸಲ್ಲಿಸಿರುವ ಈ ದಾವೆಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

5. ಮೇಲ್ಕಾಣಿಸಿದ ಉಭಯ ಪಕ್ಷಗಾರರ ವಾದ ಪ್ರತಿವಾದ ಪತ್ರಗಳಲ್ಲಿನ ಸಂಗತಿಗಳನ್ನು ಆಧರಿಸಿ ಈ ಕೆಳಗಿನಂತೆ ವಿವಾದಾಂಶಗಳನ್ನು ರೂಪಿಸಿರುತ್ತದೆ.

<u>ವಿವಾದಾಂಶಗಳು</u>

1. Whether the plaintiff proves that, the defendant No.1 has agreed to sell suit schedule property for a sum of Rs.5,00,000/- to plaintiff and in furtherance had executed agreement of sale dated 25.01.2021?

2. Whether the plaintiff further proves that, he has paid advance sale consideration amount of Rs.3,00,000/- to the defendant

No.1 and the defendant No.1 has failed to execute regular sale deed in his favour?

3. Whether the plaintiff further proves that, he is ready and willing to perform his part of contract?

4. Whether the plaintiff is entitled for reliefs as sought for ?

5. What Order or Decree?

**6.** ಈ ಮೇಲ್ಕಂಡ ವಿವಾದಾಂಶಗಳಿಗೆ ಪೂರಕವಾಗಿ ವಾದಿಯು ತನ್ನನ್ನು ತಾನು ಪಿ.ಡಬ್ಲೂ.1 ಎಂದು ಸಾಕ್ಷಿ ಮಾಡಿಸಿದ್ದು ಹಾಗೂ ತನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ಶಿವರಾಜ ತಂದೆ ಬಸವರಾಜ ಭಂಜತ್ರಿರವರನ್ನು ಪಿ.ಡಬ್ಲ್ಯೂ **2** ಎಂದು, ಪಾರ್ಶ್ವನಾಥ ಬುಜಪ್ಪ ಹೊಸಮನಿರವರನ್ನು ಪಿ.ಡಬ್ಲ್ಯೂ.**3** ಎಂದು ಸಾಕ್ಷ್ಯ ಮಾಡಿಸಿರುತ್ತಾರೆ. ವಾದಿಯು ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಪಿ.1 ರಿಂದ 4 ರಂತೆ ದಾಖಲಾತಿಗಳನ್ನು ನಿಶಾನಿಸಿಕೊಂಡಿರುತ್ತಾರೆ. ಪ್ರತಿವಾದಿಯರು ತಮ್ಮ ಪರವಾಗಿ ಯಾವುದೇ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ ಹಾಗೂ ಪಿ. ಡಬ್ಲೂ:1 ರಿಂದ 3 ರವರನ್ನು ಕೂಡ ಪ್ರತಿವಾದಿಯರ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿರುವುದಿಲ್ಲ

**7.** ವಾದಿಯ ಪರ ವಕೀಲರ ವಾದವನ್ನು ಆಲಿಸಲಾಯಿತು. ಪ್ರತಿವಾದಿಯರ ಪರ ವಕೀಲರಿಗೆ ವಾದ ಮಂಡನೆಗೆ ಸಾಕಷ್ಟು ಕಾಲಾವಕಾಶವನ್ನು ನೀಡಿದ್ದಾಗ್ಯೂ ಸಹ ವಾದ ಮಂಡನೆ ಮಾಡದೇ ಇರುವುದರಿಂದ ಪ್ರತಿವಾದಿಯರ ವಾದ ಮಂಡನೆ ಇಲ್ಲ ಎಂದು ಆದೇಶಿಸಲಾಗಿರುತ್ತದೆ.

**8.** ಮೇಲ್ಕಾಣಿಸಿದ ವಿವಾದಾಂಶಗಳಿಗೆ ಈ ನ್ಯಾಯಾಲಯದ ಉತ್ತರ ಈ ಕೆಳಗಿನಂತಿರುತ್ತದೆ:-

ವಿವಾದಾಂಶ ಸಂಖ್ಯೆ 1 :- ಸಕಾರಾತ್ಮಕ

ವಿವಾದಾಂಶ ಸಂಖ್ಯೆ 2 :- ಸಕಾರಾತ್ಮಕ

ವಿವಾದಾಂಶ ಸಂಖ್ಯೆ 3 :- ಸಕಾರಾತ್ಮಕ

ವಿವಾದಾಂಶ ಸಂಖ್ಯೆ 4 :- ಸಕಾರಾತ್ಮಕ

ವಿವಾದಾಂಶ ಸಂಖ್ಯೆ 5 :- ಅಂತಿಮ ಆದೇಶದಂತೆ

ಕಾ ರ ಣ ಗ ಳು

**9**. **ವಿವಾದಾಂಶ ಸಂಖ್ಯೆ 1 ಮತ್ತು 2:-** ಈ ಎರಡು ವಿವಾದಾಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಮತ್ತು ಈ ವಿವಾದಾಂಶಗಳಿಗೆ ನೀಡುವ ಕಾರಣಗಳು ಒಂದೇ ಆಗಿರುವುದರಿಂದ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಈ ವಿವಾದಾಂಶಗಳನ್ನು ಒಟ್ಟಿಗೆ ಚರ್ಚಿಸಲಾಗಿರುತ್ತದೆ.

10. ಈ ಎರಡೂ ವಿವಾದಾಂಶಗಳ ರುಜುವಾತಿನ ಹೊಣೆಗಾರಿಕೆಯು ವಾದಿಯ ಮೇಲೆ ಇದ್ದು, ಈ ವಿವಾದಾಂಶಗಳ ಕುರಿತು ವಾದಿಯು ರುಜುವಾತು ಪಡಿಸಬೇಕಾಗಿರುವುದರಿಂದ ವಾದಿಯ ಸಾಕ್ಷಕ್ಕಾಗಿ ದಾವೆಯನ್ನು ಪ್ರಾರಂಭದಲ್ಲಿ ನಿಗದಿಪಡಿಸಿದ್ದು, ಆ ಸಮಯದಲ್ಲಿ ವಾದಿಯು ತನ್ನ ಸಾಕ್ಷ್ಯವನ್ನು ಮಾಡಿಸಿರುತ್ತಾರೆ.

**11.** ಈ ವಿವಾದಾಂಶಗಳ ಕುರಿತು ವಾದಿಯು ತನ್ನ ವಾದಪತ್ರದಲ್ಲಿ ಈ ಕೆಳಕಂಡಂತೆ ನಮೂದಿಸಿರುತ್ತಾರೆ:-

ದಾವಾ ಅನುಸೂಚಿ ಸ್ವತ್ತಿಗೆ 1 ನೇ ಪ್ರತಿವಾದಿಯು ನಿರೂಪಾಧಿಕ ಮಾಲೀಕತ್ವವನ್ನು ಹೊಂದಿ ಸ್ವಾದೀನಾನುಭದಲ್ಲಿದ್ದರು. ಸದರಿ 1 ನೇ ಪ್ರತಿವಾದಿಯು ದಾವಾ ಅನುಸೂಚಿ ಸ್ವತ್ತಿನ ಕುರಿತು ದಿನಾಂಕ 25.01.2021 ರಂದು ವಾದಿಗೆ ರೂ:5,00,000/- ಗಳಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಲು ಕರಾರು ಒಪ್ಪಂದ ಮಾಡಿಕೊಂಡು, ಸದರಿ ಕ್ರಯದ ಕರಾರು ಪ್ರಕಾರ ವಾದಿಯು ರೂ:3,00,000 ರೂಪಾಯಿ ಹಣವನ್ನು 1 ನೇ ಪ್ರತಿವಾದಿಗೆ ನೀಡಿರುತ್ತಾರೆ. ಸದರಿ ಕ್ರಯ ಕರಾರು ಪತ್ರವನ್ನು ದಿನಾಂಕ: 25.01.2021 ರಂದು ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೊಂದಣಿ ಮಾಡಿ ಕೊಟ್ಟಿರುತ್ತಾರೆ. ಸದರಿ ಕ್ರಯ ಕರಾರು ಪತ್ರದ ಪ್ರಕಾರ 1 ನೇ ಪ್ರತಿವಾದಿಯು ಮೂರು ವರ್ಷಗಳ ಒಳಗೆ ವಾದಿಯ

ಪರವಾಗಿ ಕ್ರಯ ಪತ್ರವನ್ನು ಬರೆದುಕೊಡಲು ಷರತ್ತು ಇರುತ್ತದೆ. ಹೀಗಿದಾಗ್ಯೂ ಸಹ 1 ನೇ ಪ್ರತಿವಾದಿಯು ದಾವಾ ಆಸ್ತಿ ಸರ್ವೆ ನಂ: 141/3 ಕ್ಷೇತ್ರ 31 ಗುಂಟೆ ಎಲ್ಲಾ ಆಸ್ತಿಯ ಕುರಿತು ದಿನಾಂಕ 07.04.2022 ರಂದು 2 ನೇ ಪ್ರತಿವಾದಿಗೆ ನೊಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ಹಾಗಾಗಿ 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ಪರವಾಗಿ ಜಾರಿ ಮಾಡಿ ಕೊಟ್ಟಿರುವ ಕ್ರಯ ಪತ್ರವು ಕಾನೂನು ಬಾಹಿರ ಮತ್ತು ನಾಮಕವಾಸ್ಥೆಯ ಕ್ರಯ ಪತ್ರವಾಗಿರುವುದರಿಂದ ಸದರಿ ಕ್ರಯ ಪತ್ರವು ವಾದಿಗೆ ಬಂಧನಕಾರಕವಾಗಿರುವುದಿಲ್ಲ. 1 ನೇ ಪ್ರತಿವಾದಿಯು ದಾವಾ ಆಸ್ತಿಯ ಕುರಿತು ವಾದಿಯ ಪರವಾಗಿ ಕ್ರಯ ಕರಾರು ಪತ್ರವನ್ನು ದಿನಾಕ: 25.01.2021 ರಂದು ಮಾಡಿಕೊಟ್ಟಿರುತ್ತಾರೆ ಎಂಬ ವಿಷಯವು 2 ನೇ ಪ್ರತಿವಾದಿಗೆ ಗೊತ್ತಿದ್ದರೂ ಕೂಡ ದಾವಾ ಆಸ್ತಿಯನ್ನು ಖರೀದಿಸಿರುತ್ತಾರೆ. ಹಾಗಾಗಿ 2 ನೇ ಪ್ರತಿವಾದಿಯು ದಾವಾ ಆಸ್ತಿಯ ಸದ್ಭಾವನೆಯ ಖರೀದಿದಾರನಾಗಿರುವುದಿಲ್ಲ. ದಾವಾ ಆಸ್ತಿಯ ಮೇಲೆ ಯಾವುದೇ ರೀತಿಯ ಹಕ್ಕು, ಅಧಿಕಾರ ಇಲ್ಲದೇ ಇದ್ದರೂ ಕೂಡ 3 ನೇ ವ್ಯಕ್ತಿಗಳಿಗೆ ಮಾರಾಟ ಮಾಡಲು ಪ್ರಯತ್ನಿಸಿರುತ್ತಾರೆ. ವಾದಿಯು ಪ್ರತಿವಾದಿಗಳಿಗೆ ಮೌಖಿಕವಾಗಿ ಕ್ರಯಪತ್ರವನ್ನು ವಾದಿಯ ಪರವಾಗಿ ಜಾರಿಗೊಳಿಸಿಕೊಡುವಂತೆ ಕೋರಿರುತ್ತಾರೆ. ಆದರೆ, ಪ್ರತಿವಾದಿಗಳು ಕ್ರಯ ಪತ್ರವನ್ನು ಜಾರಿಗೊಳಿಸಲು ಒಪ್ಪಿರುವುದಿಲ್ಲ. ವಾದಿಯು ಕ್ರಯಪತ್ರವನ್ನು ಜಾರಿಗೊಳಿಸುವ ತನ್ನ ಪಾಲಿನ ಕರ್ತವ್ಯವನ್ನು ನೆರವೇರಿಸಲು ಸದಾಕಾಲ ಸಿದ್ದನಿರುತ್ತಾನೆ. ವಾದಿಯ ಕರಾರಿನಲ್ಲಿನ ತನ್ನ ಪಾಲಿನ ಕರ್ತವ್ಯವನ್ನು ನೆರವೇರಿಸಲು ಯಾವುದೇ ಉಲ್ಲಂಘನೆಯನ್ನು ಮಾಡಿರುವುದಿಲ್ಲ. ಆದ್ದರಿಂದ, ದಾವೆಯಲ್ಲಿ ಕೋರಿರುವಂತೆ ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

**12.** ಈ ವಿವಾದಾಂಶಗಳ ಕುರಿತು 1 ನೇ ಪ್ರತಿವಾದಿಯು ತಮ್ಮ ಪ್ರತಿವಾದಪತ್ರದಲ್ಲಿ ಈ ಕೆಳಕಂಡಂತೆ ನಮೂದಿಸಿರುತ್ತಾರೆ:-

ವಾದಿಯು ವಾದ ಪತ್ರದಲ್ಲಿ ಹೇಳಿರುವ ಎಲ್ಲಾ ಅಂಶಗಳನ್ನು ನಿರ್ಧಿಷ್ಟವಾಗಿ ಅಲ್ಲಗಳೆದಿರುತ್ತಾರೆ. ದಾವಾ ಅನುಸೂಚಿ ಸ್ವತ್ತಿನ ಕುರಿತು 1 ನೇ ಪ್ರತಿವಾದಿಯು ಯಾವುದೇ ಕ್ರಯ ಕರಾರು ಪತ್ರವನ್ನು ವಾದಿಯ ಪರವಾಗಿ ಜಾರಿ ಮಾಡಿ

ಕೊಟ್ಟಿರುವುದಿಲ್ಲ. 2021 ನೇ ಸಾಲಿನಲ್ಲಿ ಕರೋನಾ ಸಾಂಕ್ರಾಮಿಕ ರೋಗ ಇರುವುದರಿಂದ ಯಾವುದೇ ಬ್ಯಾಂಕುಗಳಿಂದ ಸಾಲ ಸಿಗದೇ ಇರುವುದರಿಂದ 1 ನೇ ಪ್ರತಿವಾದಿಯು ವಾದಿಯಿಂದ ರೂ: 40,000 ಗಳನ್ನು ಸಾಲವಾಗಿ ಪಡೆದಿದ್ದು, ಸದರಿ ಸಾಲಕ್ಕೆ ವಾದಿಯು ಪ್ರತಿ ತಿಂಗಳು ಪ್ರತಿಶತ 20% ಬಡ್ಡಿಯಂತೆ ಹಣವನ್ನು ಮರುಪಾವತಿಸುವಂತೆ ಮತ್ತು ಸದರಿ ಸಾಲದ ಭದ್ರತೆಗಾಗಿ ನಾಮಕಾವಾಸ್ಥೆಯ ಕ್ರಯ ಕರಾರು ಪತ್ರವನ್ನು ತನ್ನ ಪರವಾಗಿ ಜಾರಿ ಮಾಡಿಕೊಡುವಂತೆ 1 ನೇ ಪ್ರತಿವಾದಿಗೆ ಷರತ್ತುಗಳನ್ನು ಹಾಕಿರುತ್ತಾರೆ. ಸದರಿ 1 ನೇ ಪ್ರತಿವಾದಿಗೆ ಕರೋನಾ ಸಮಯದಲ್ಲಿ ಯಾವುದೇ ಬ್ಯಾಂಕುಗಳಿಂದ ಸಾಲ ಸಿಗದೇ ಇರುವುದರಿಂದ ವಾದಿಯ ಷರತ್ತುಗಳಿಗೆ ಒಪ್ಪಿಕೊಂಡಿರುತ್ತಾರೆ. ಆದರೆ ವಾದಿ ಮತ್ತು 1 ನೇ ಪ್ರತಿವಾದಿಯ ನಡುವೆ ಸಾಲದ ವ್ಯವಹಾರವಾಗಿರುತ್ತದೆಯೇ ಹೊರತು ಯಾವುದೇ ಕ್ರಯ ಕರಾರು ಆಗಿರುವುದಿಲ್ಲ ಹಾಗೂ ವಾದಿಯು ಕ್ರಯ ಕರಾರು ಪತ್ರವನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತಾರೆ. ಆದ್ದರಿಂದ ಈ ಮೇಲಿನ ಕಾರಣಗಳಿಗಾಗಿ ವಾದಿಯು ಸಲ್ಲಿಸಿರುವ ಈ ದಾವೆಯನ್ನು ವಜಾಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ

**13.** ಈ ಕುರಿತು ವಾದಿಯು ತನ್ನನ್ನು ತಾನು ಪಿ.ಡಬ್ಲ್ಯೂ .1 ಎಂದು ಸಾಕ್ಷ್ಯ ಮಾಡಿಸಿದ್ದು, ತನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿ ವಾದ ಪತ್ರದಲ್ಲಿನ ಅಂಶಗಳನ್ನೇ ಪುನರುಚ್ಚರಿಸಿರುತ್ತಾರೆ. ವಾದಿಯು ತನ್ನ ಸಾಕ್ಷಕ್ಕೆ ಪೂರಕವಾಗಿ ಶಿವರಾಜ ತಂದೆ ಬಸವರಾಜ ಭಂಜತ್ರಿರವರನ್ನು ಪಿ.ಡಬ್ಲ್ಯೂ **2** ಎಂದು ಹಾಗೂ ಪಾರ್ಶ್ವನಾಥ ಬುಜಪ್ಪ ಹೊಸಮನಿರವರನ್ನು ಪಿ.ಡಬ್ಲ್ಯೂ.**3** ಎಂದು ವಿಚಾರಣೆಗೆ ಒಳಪಡಿಸಿದ್ದು, ಸದರಿ ಸಾಕ್ಷಿದಾರರು ಪಿ.ಡಬ್ಲ್ಯೂ. 1 ರವರ ಸಾಕ್ಷ್ಯಕ್ಕೆ ಪೂರಕವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

**14.** ವಾದಿ ತನ್ನ ಮೌಖಿಕ ಸಾಕ್ಷಕ್ಕೆ ಪೂರಕವಾಗಿ ನಿಪಿ.1 ರಿಂದ ನಿಪಿ.4 ರವರೆಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ.

ನಿಶಾನೆ ಪಿ.1 ಮತ್ತು 2 ರಂತೆ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು,ನಿಪಿ.1 ರ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಬಸವನ ಬಾಗೇವಾಡಿ ಗ್ರಾಮದ ಸರ್ವೆ ನಂ:141/3 ವಿಸ್ತೀರ್ಣ 31 ಗುಂಟೆ ಜಮೀನ ಪಹಣಿ ಪತ್ರಿಕೆಯ ಕಬ್ಜೆ ಅಥವಾ ಸ್ವಾಧೀನದಾರರ ಹೆಸರು ಕಾಲಂನಲ್ಲಿ ರಮೇಶ ತಂದೆ ಮಲ್ಲಪ್ಪ ಚಿಂಚೋಳಿರವರ ಹೆಸರು ನಮುದಾಗಿರುವುದು ಕಂಡು ಬರುತ್ತದೆ. ನಿಶಾನೆ ಪಿ.2 ರ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಬಸವನ ಬಾಗೆವಾಡಿ ಗ್ರಾಮದ ಸರ್ವೆ ನಂ:141/3 ವಿಸ್ತೀರ್ಣ 31 ಗುಂಟೆ ಜಮೀನ ಪಹಣಿ ಪತ್ರಿಕೆಯ ಕಬ್ಜೆ ಅಥವಾ ಸ್ವಾಧೀನದಾರರ ಹೆಸರು ಕಾಲಂನಲ್ಲಿ ಶ್ರೀಶೈಲ ತಂದೆ ಸೋಮಪ್ಪ ಮಾಲಗಾರ ರವರ ಹೆಸರು ನಮುದಾಗಿರುವುದು ಕಂಡು ಬರುತ್ತದೆ. ನಿ.ಪಿ.3 ರಂತೆ ನೊಂದಾಯಿತ ಕ್ರಯ ಕರಾರು ಪತ್ರವನ್ನು ಹಾಜರುಪಡಿಸಿದ್ದು ಸದರಿ ಕ್ರಯ ಕರಾರು ಪತ್ರವನ್ನು ಪರಿಶೀಲಿಸಿದಾಗ ದಿನಾಂಕ: 25.01.2021 ರಂದು ಶ್ರೀಶೈಲ ತಂದೆ ಸೋಮಪ್ಪ ಮಾಲಗಾರರವರಿಂದ ಶಂಕರ ತಂದೆ ಭೀಮಶಿ ಭಜಂತ್ರಿರವರು ದಾವಾ ಆಸ್ತಿಯನ್ನು ನೊಂದಾಯಿತ ಕ್ರಯ ಕರಾರು ಪತ್ರದ ಮೂಲಕ ರೂ.5,00,000/- ಗಳಿಗೆ ಖರೀದಿಸಿರುವುದು ಕಂಡು ಬರುತ್ತದೆ. ನಿಶಾನೆ ಪಿ.4 ರಂತೆ ಮ್ಯುಟೇಶನ ರಜಿಸ್ಟರ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

**15.** ಈ ಕುರಿತು ಪಿ.ಡಬ್ಲ್ಯೂ.1 ರಿಂದ 3 ರವರನ್ನು ಪ್ರತಿವಾದಿಯರ ಪರ ವಕೀಲರು ಪಾಟೀ ಸವಾಲಗೆ ಒಳಪಡಿಸಿರುವುದಿಲ್ಲ 1 ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ಹೇಳಿರುವ ಅಂಶಗಳನ್ನು ರುಜುವಾತು ಪಡಿಸಲು ಯಾವುದೇ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ.

**16.** ಈ ವಿವಾದಾಂಶಗಳ ಕುರಿತಾಗಿ ಉಭಯ ಪಕ್ಷಗಾರರ ಹೇಳಿಕೆಗಳು, ವಾದಿ ಪರ ಹಾಜರುಪಡಿಸಿರುವ ಮೌಖಿಕ ಮತ್ತು ದಾಖಲಾತಿ ಸಾಕ್ಷವನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. 1 ನೇ ಪ್ರತಿವಾದಿಯು ನಿ.ಪಿ.3 ರಂತೆ ಕ್ರಯ ಕರಾರು ಪತ್ರವನ್ನು ವಾದಿಯ ಪರವಾಗಿ ಜಾರಿ ಮಾಡಿಕೊಟ್ಟಿರುತ್ತಾರೆ ಮತ್ತು ಕ್ರಯ ಕರಾರಿನ ಬಾಬ್ತು ಮುಂಗಡವಾಗಿ ರೂ.3,00,000/- ಹಣವನ್ನು ವಾದಿಯು 1 ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದು ವಾದಿಯು ತಮ್ಮ ವಾದ ಪತ್ರದಲ್ಲಿ ಹೇಳಿರುತ್ತಾರೆ. ಇದಕ್ಕೆ

ಪ್ರತಿಯಾಗಿ 1 ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ತಾವು ವಾದಿಯಿಂದ ರೂ.40,000/- ಹಣವನ್ನು ಪಡೆದಿರುತ್ತೇವೆ. ಆದರೆ ವಾದಿ ಮತ್ತು 1 ನೇ ಪ್ರತಿವಾದಿಯು ಮಧ್ಯ ಆದ ವ್ಯವಹಾರವು ಹಣದ ವ್ಯವಹಾರವಾಗಿರುತ್ತದೆ ಹೊರತು ದಾವಾ ಸ್ವತ್ತಿನ ಕುರಿತು ನಿ.ಪಿ.3 ರ ಕ್ರಯದ ಕರಾರು ಪತ್ರನ್ನು ಮಾಡಿಕೊಟ್ಟಿಲ್ಲವೆಂದು, ಬದಲಾಗಿ ನಿ.ಪಿ.3 ರ ದಾಖಲಾತಿಯನ್ನು ಹಣದ ಭದ್ರತೆಗೆ ಜಾರಿ ಮಾಡಿ ಕೊಟ್ಟಿರುತ್ತೇನೆ ಎಂದು ಹೇಳಿರುತ್ತಾರೆ. ಸದರಿ ಅಂಶವನ್ನು ರುಜುವಾತುಪಡಿಸುವ ಹೊಣೆಗಾರಿಕೆಯು 1 ನೇ ಪ್ರತಿವಾದಿಯು ಮೇಲೆ ಇರುತ್ತದೆ. ಈ ದಾವೆಯಲ್ಲಿ 2 ನೇ ಪ್ರತಿವಾದಿಯು ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. ಈ ಪ್ರಸ್ತುತ ದಾವೆಯಲ್ಲಿ 1 ನೇ ಪ್ರತಿವಾದಿಯು ದಾವಾ ಆಸ್ತಿಗೆ ನಿರುಪಾಧಿಕ ಮಾಲೀಕತ್ವವನ್ನು ಹೊಂದಿರುವ ಕುರಿತು ಮತ್ತು 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ಪರವಾಗಿ ದಿಃ07.04.2022 ರಂದು ನೊಂದಾಯಿತ ಕ್ರಯ ಪತ್ರವನ್ನು ಜಾರಿ ಮಾಡಿಕೊಟ್ಟಿರುವ ಕುರಿತು ಯಾವುದೇ ವಿವಾದ ಇರುವುದಿಲ್ಲ.

**17.** ವಾದಿಯು ತನ್ನ ವಾದ ಪತ್ರದಲ್ಲಿ ಹೇಳಿರುವ ಅಂಶಗಳನ್ನು ರುಜುವಾತುಪಡಿಸಲು ವಾದಿಯು ಹಾಜರು ಪಡಿಸಿರುವ ನಿಶಾನೆ ಪಿ.3 ರ ಕ್ರಯ ಕರಾರು ಪತ್ರವನ್ನು ಪರಿಶೀಲಿಸಿದಾಗ ದಿನಾಂಕಃ 25.01.2021 ರಂದು ದಾವಾ ಆಸ್ತಿಯನ್ನು ವಾದಿಯಾದ ಶ್ರೀಶೈಲ ತಂದೆ ಸೊಮಪ್ಪ ಮಾಲಗಾರರವರಿಂದ ಶಂಕರ ತಂದೆ ಭೀಮಶಿ ಭಜಂತ್ರಿರವರು ನೊಂದಾಯಿತ ಕ್ರಯ ಕರಾರು ಪತ್ರದ ಮುಖಾಂತರ ಖರೀದಿಸಿರುವುದು ಹಾಗೂ ವಾದಿಯು ಮುಂಗಡವಾಗಿ ರೂ.3,00,000/- ಹಣವನ್ನು 1 ನೇ ಪ್ರತಿವಾದಿಗೆ ನಗದಾಗಿ ಪಾವತಿಸಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ.

**18.** ವಾದಿಯು ನಿ.ಪಿ-3 ನ್ನು ರುಜುವಾತುಪಡಿಸಲು ಸದರಿ ದಾಖಲಾತಿಯಲ್ಲಿನ ಸಾಕ್ಷಿದಾರರು ಮತ್ತು ಬಿಕ್ಕಲಂದಾರರನ್ನು ಪಿ.ಡಬ್ಲ್ಯೂ-2 ಮತ್ತು ಪಿ.ಡಬ್ಲ್ಯೂ-3 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ. ಸದರಿ ಸಾಕ್ಷಿದಾರರು ತಮ್ಮ ಸಾಕ್ಷ್ಯಗಳಲ್ಲಿ ನಿ.ಪಿ-3 ರ ದಾಖಲಾತಿಯು ಜಾರಿಯಾದ ಕುರಿತು ಸ್ಪಷ್ಟವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಅಂತೆಯೇ, ನಿ.ಪಿ-3 ಜಾರಿಯಾಗುವ ಕಾಲಕ್ಕೆ 1 ನೇ ಪ್ರತಿವಾದಿಯು ವಾದಿಯಿಂದ

ರೂ.3,00,000/- ಹಣವನ್ನು ಪಡೆದಿರುವುದನ್ನು ಸ್ಪಷ್ಟೀಕರಿಸಿರುತ್ತಾರೆ. ಅಂತೆಯೇ, ಪಿ.ಡಬ್ಲ್ಯೂ-2 ಮತ್ತು ಪಿ.ಡಬ್ಲ್ಯೂ-3 ರವರು ನಿ.ಪಿ-3 ರಲ್ಲಿರುವ ತಮ್ಮ ಮತ್ತು 1 ನೇ ಪ್ರತಿವಾದಿಯು ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ.

19. ಈ ಮೇಲಿನ ಪಿ.ಡಬ್ಯೂ.1 ರಿಂದ 3 ರವರ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ 1 ನೇ ಪ್ರತಿವಾದಿಯ ಪರ ವಕೀಲರು ಪಿ.ಡಬ್ಲ್ಯೂ-1 ರಿಂದ 3 ರವರನ್ನು ಪಾಟೀ ಸವಾಲು ಮಾಡಿ, ಪಿ.ಡಬ್ಲ್ಯೂ .1 ರಿಂದ 3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿನ ಅಂಶಗಳಿಗೆ ಮತ್ತು ನಿ.ಪಿ.3 ರ ಜಾರಿಯಾದ ಕುರಿತು ವ್ಯತಿರಿಕ್ತವಾಗಿ ಯಾವುದೇ ಅಂಶಗಳನ್ನು ಪಡೆಯಲು ವಿಫಲರಾಗಿರುತ್ತಾರೆ. ಅಲ್ಲದೇ 1 ನೇ ಪ್ರತಿವಾದಿಯು ತಮ್ಮ ಪರವಾಗಿ ಯಾವುದೇ ಸಾಕ್ಷ್ಯವನ್ನು ಮಾಡಿಸಿ ಸದರಿ ವಾದಿಯು ಈ ದಾವೆಯಲ್ಲಿ ಹಾಜರುಪಡಿಸಿರುವ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಖಂಡಿಸಿರುವುದಿಲ್ಲ.

**20.** 1 ನೇ ಪ್ರತಿವಾದಿಯು ಸದರಿ ತಮ್ಮ ಪ್ರತಿವಾದ ಪತ್ರದಲ್ಲಿ ತಾನು ವಾದಿಯಿಂದ ನಿ.ಪಿ-3 ರಲ್ಲಿ ನಮೂದಿಸಿರುವಂತೆ ರೂ: 3,00,000/- ಹಣವನ್ನು ಪಡೆದಿರುವುದಿಲ್ಲ , ಬದಲಾಗಿ ಕೇವಲ ರೂ: 40,000/- ಹಣವನ್ನು ಕರೋಣ ಸಮಯದಲ್ಲಿ ಪಡೆದಿರುತ್ತೇನೆ. ನಿ.ಪಿ. 3 ರ ದಾಖಲಾತಿಯನ್ನು ಹಣದ ಭದ್ರತೆಗಾಗಿ ವಾದಿಯ ಪರವಾಗಿ ಜಾರಿ ಮಾಡಿಕೊಡಲಾಗಿರುತ್ತದೆ ವಿನಃ ಕ್ರಯ ಕರಾರು ಪತ್ರವಾಗಿರುವುದಿಲ್ಲ ಎಂದು ಹೇಳಿರುತ್ತಾರೆ. ಇದಕ್ಕೆ ಪ್ರತಿಯಾಗಿ ವಾದಿ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ ಪ್ರತಿವಾದಿಯ ಪ್ರತಿವಾದ ಪತ್ರವನ್ನು ನಿರ್ಧಿಷ್ಟವಾಗಿ ಅಲ್ಲಗಳೆದಿರುತ್ತಾರೆ. ವಾದಿಯು ಹಾಜರುಪಡಿಸಿರುವ ನಿ.ಪಿ.3 ರ ಕ್ರಯ ಕರಾರು ಪತ್ರವು ನೊಂದಣಿ ಕರಾರು ಪತ್ರವಾಗಿರುತ್ತದೆ. ಸದರಿ ಕರಾರು ಪತ್ರದಲ್ಲಿನ ಒಕ್ಕಣಿಕೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ 1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ವಾದಿಗೆ ರೂ.5,00,000/- ಗಳಿಗೆ ಮಾರಾಟ ಮಾಡಿರುವುದು ಮತ್ತು ಸದರಿ ಕ್ರಯ ಕರಾರಿನ ಬಾಬ್ತು ರೂ.3,00,000/- ಹಣವನ್ನು ಮುಂಗಡವಾಗಿ ವಾದಿಯಿಂದ 1 ನೇ ಪ್ರತಿವಾದಿಯು ಪಡೆದಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ.

21. ನಿ.ಪಿ.3 ರ ಒಕ್ಕಣಿಕೆಯನ್ನು ಪರಿಗಣಿಸುವ ಕುರಿತು ಕಾನೂನಿನ ಪ್ರಕ್ರಿಯೆಯ ಅಡಿಯಲ್ಲಿ ಚರ್ಚಿಸುವ ಅಗತ್ಯತೆ ಇರುತ್ತದೆ. ಯಾವುದೇ ಒಂದು ದಾಖಲಾತಿ ನೋಂದಣಿ ದಾಖಲಾತಿಯಾಗಿದ್ದಲ್ಲಿ ಸದರಿ ದಾಖಲಾತಿಯನ್ನು ಪರಿಗಣಿಸುವ ಕುರಿತು ನ್ಯಾಯಾಲಯವು ಈ ಕೆಳಕಂಡ ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪಜನ್ಯವನ್ನು ಉಲ್ಲೇಖಿಸುತ್ತದೆ.

**AIR 2006 SC 3608**

**Prem Singh and others Vs.**

**Birbal and others**

(2) Presumption – Registered document – Presumption that it is validly executed.

> There is a presumption that a registered document is validly executed. A registered document, therefore, prima facie would be valid in law. The onus of proof, thus, would be on a person who leads evidence to rebut the presumption. In the instant case, respondent No.1 has not been able to rebut the said presumption.

**22**. ಈ ಮೇಲ್ಕಂಡ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪುಜನ್ಯವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಯಾವುದೇ ಒಂದು ನೋಂದಣಿ ದಾಖಲಾತಿಯನ್ನು ಕಾನೂನುಬದ್ಧವಾಗಿ ನೋಂದಣಿ ಮಾಡಿದ್ದಾಗ ಸದರಿ ದಾಖಲಾತಿ ಮೇಲ್ನೋಟಕ್ಕೆ ಕಾನೂನಿನ ಮಾನ್ಯತೆಯನ್ನು ಹೊಂದಿರುತ್ತದೆ. ಸದರಿ ದಾಖಲಾತಿಯ ಜಾರಿಗೊಳಿಸುವಿಕೆಯ ಕುರಿತು ಯಾವ ಪಕ್ಷಗಾರರು ಆಕ್ಷೇಪಣೆಯನ್ನು ಮಾಡುತ್ತಾರೋ ಅಂತಹ ಪಕ್ಷಗಾರ ಸದರಿ ದಾಖಲಾತಿಯನ್ನು ಖಂಡಿಸಬಹುದಾದಂತಹ ಸಾಕ್ಷ್ಯವನ್ನು ಮಾಡಬೇಕಾಗುತ್ತದೆ. ಒಂದೊಮ್ಮೆ ಯಾವ ವ್ಯಕ್ತಿ ಸದರಿ ದಾಖಲಾತಿಯ ಕುರಿತು ಆಕ್ಷೇಪಣೆಯನ್ನು ಮಾಡುತ್ತಾನೋ ಅಂತಹ ವ್ಯಕ್ತಿ ಖಂಡಿಸಬಹುದಾದ ಅಂಶಗಳನ್ನು

ಸಾಬೀತುಪಡಿಸದಿದ್ದಲ್ಲಿ ಸದರಿ ದಾಖಲಾತಿಗಳನ್ನು ಹಾಜರುಪಡಿಸಿರುವಂತೆ ಪೂರ್ವಭಾವನೆಯನ್ನು ಮಾಡಬಹುದೆಂದು ಸ್ಪಷ್ಟೀಕರಿಸಿರುತ್ತದೆ.

**23**. ಈ ಮೇಲ್ಕಂಡ ತೀರ್ಪುಜನ್ಯದ ಅನುಪಾತವನ್ನು ಈ ಪ್ರಸ್ತುತ ಪ್ರಕರಣದ ವಸ್ತುಸ್ಥಿತಿಗೆ ಅನ್ವಯಿಸಲಾಗಿ 1 ನೇ ಪ್ರತಿವಾದಿಯು ದಿನಾಂಕ 25.01.2021 ರಂದು ವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿ ನಿ.ಪಿ-3 ರ ಕ್ರಯ ಕರಾರು ಪತ್ರವನ್ನು ಮಾಡಿಕೊಟ್ಟು ಮುಂಗಡವಾಗಿ ರೂ.3,00,000/- ಹಣವನ್ನು ಪಡೆದಿರುತ್ತಾರೆಂದು ನಿಶಾನೆ ಪಿ. 3 ರ ಕ್ರಯ ಕರಾರು ಪತ್ರದಲ್ಲಿ ನಮೂದಿಸಲಾಗಿರುತ್ತದೆ . 1 ನೇ ಪ್ರತಿವಾದಿಯು ವಾದಿಯಿಂದ ಪಡೆದಂತಹ ಸಾಲದ ಭದ್ರತೆಗಾಗಿ ಜಾರಿ ಮಾಡಿಕೊಟ್ಟಂತಹ ನಾಮಕಾವಾಸ್ಥೆಯ ಕ್ರಯ ಕರಾರು ಪತ್ರವೆಂದು ತಕರಾರು ಮಾಡಿರುತ್ತಾರೆ. 1 ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ಈ ಮೇಲ್ಕಂಡಂತೆ ನಿಲುವುಗಳನ್ನು ತೆಗೆದುಕೊಂಡಿದ್ದಾಗ್ಯೂ ಸಹ ನಿಪಿ.3 ರ ಕ್ರಯದ ಕರಾರು ಪತ್ರವನ್ನು ಸಾಲದ ಭದ್ರತೆಗಾಗಿ ಮಾಡಿಕೊಟ್ಟಂತಹ ದಾಖಲಾತಿ ಎಂದು ಸಾಬೀತುಪಡಿಸಲು ವಿಫಲರಾಗಿರುತ್ತಾರೆ. ಹಾಗಾಗಿ ನಿಪಿ.3 ರಂತೆ ಹಾಜರುಪಡಿಸಿರುವ ಕ್ರಯ ಕರಾರು ಪತ್ರವು ಕಾನೂನು ಪರಿಕಲ್ಪನೆಯಡಿಯಲ್ಲಿ ಜಾರಿಗೊಳಿಸಿ ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯು ವಾದಿಗೆ ಮಾರಾಟ ಮಾಡಿರುತ್ತಾರೆ ಎಂದು ನ್ಯಾಯಾಲಯ ತೀರ್ಮಾನಕ್ಕೆ ಬರುತ್ತದೆ.

24. ಯಾವುದೇ ಒಂದು ಪ್ರಕರಣದಲ್ಲಿ ಪ್ರತಿವಾದಿಯು ಕೆಲವೊಂದು ನಿಲುವುಗಳನ್ನು ತೆಗೆದುಕೊಂಡಾಗ ಅಂತಹ ಅಂಶಗಳನ್ನು ಸಾಬೀತುಪಡಿಸುವಂತಹ ಹೊಣೆಗಾರಿಕೆ ಪ್ರತಿವಾದಿಯದ್ದಾಗಿರುತ್ತದೆ. ಈ ಕುರಿತಾಗಿ ಮಾನ್ಯ ನ್ಯಾಯಾಲಯವು ಈ ಕೆಳಕಂಡ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸುತ್ತದೆ.

**AIR 1999 Supreme Court 1441**

**Vidhyadhar Vs. Mankikrao and another**

> (A) Evidence Act (1 of 1872), S. 114 – Adverse inference- Party to suit – Not entering the witness box – Give rise to interference adverse against him.
>
> Where a party to the suit does not appear into the witness box and states his own case on oath and does not offer himself to be cross examined by the other side, a presumption would arise that the case set up by him is not correct.

25. ಈ ಮೇಲ್ಕಂಡ ತೀರ್ಪಿನ ಅನುಪಾತವನ್ನು ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸ ಲಾಗಿ ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿ ರೂ: 40000 ಹಣದ ಭದ್ರತೆಗಾಗಿ ನಿಪಿ-3 ರ ಕ್ರಯದ ಕರಾರು ಪತ್ರವನ್ನು ತಾನು ವಾದಿಗೆ ಬರೆದುಕೊಟ್ಟಿರುತ್ತೇನೆ ಎಂದು ಉಲ್ಲೇಖಿಸಿರುತ್ತಾರೆ. ಅದಕ್ಕೆ ಪೂರಕವಾಗಿ ಸದರಿ ಅಂಶವನ್ನು ಸಾಬೀತುಪಡಿಸಲು 1 ನೇ ಪ್ರತಿವಾದಿಯು ಯಾವುದೇ ಸಾಕ್ಷ್ಯವನ್ನು ತನ್ನ ಪರವಾಗಿ ಮಾಡಿರುವುದಿಲ್ಲ ಮತ್ತು ಪಿ.ಡಬ್ಲ್ಯು-1 ರಿಂದ 3 ರವನ್ನು ಸಹ ಪಾಟೀ ಸವಾಲಿಗೆ ಒಳಪಡಿಸಿರುವುದಿಲ್ಲ. ಆದ್ದರಿಂದ 1 ನೇ ಪ್ರತಿವಾದಿಯ ಪ್ರತಿವಾದ ಪತ್ರದಲ್ಲಿನ ಅಂಶಗಳನ್ನು ಸಾಬೀತುಪಡಿಸಲು ವಿಫಲರಾಗಿರುತ್ತಾರೆಂದು ನ್ಯಾಯಾಲಯವು ತೀರ್ಮಾನಕ್ಕೆ ಬರುತ್ತದೆ.

26. 1 ನೇ ಪ್ರತಿವಾದಿಯು ನಿ.ಪಿ-3 ರ ಕ್ರಯ ಕರಾರು ಪತ್ರವನ್ನು ರದ್ದುಗೊಳಿಸಲು ಯಾವುದೇ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿರುವುದು ಸಹ ಕಂಡು ಬರುವುದಿಲ್ಲ. ಅಲ್ಲದೇ ನಿಶಾನೆ ಪಿ.3 ರ ದಾಖಲಾತಿಯನ್ನು ಜಾರಿ ಮಾಡಿಕೊಟ್ಟ ನಂತರ ನಿಶಾನೆ ಪಿ.3 ರ ದಾಖಲಾತಿಯನ್ನು ಪ್ರಶ್ನಿಸಿ ಯಾವುದೇ ದಾವೆಯನ್ನು ಯಾವುದೇ ನ್ಯಾಯಾಲಯದಲ್ಲಿ ಸಲ್ಲಿಸಿರುವುದು ಕಂಡುಬರುವುದಿಲ್ಲ. ವಾದಿಯು 1 ನೇ ಪ್ರತಿವಾದಿಯಿಂದ ನಿ.ಪಿ-3 ನ್ನು ಮೋಸದಿಂದ ಜಾರಿಗೊಳಿಸಿಕೊಂಡಿದ್ದಲ್ಲಿ 1 ನೇ ಪ್ರತಿವಾದಿಯು ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಅಥವಾ ಈ ದಾವೆಯನ್ನು ಸಲ್ಲಿಸಿದ ನಂತರದಲ್ಲಾಗಲೀ ವಾದಿಯ ವಿರುದ್ಧ ಯಾವ ಕಾರಣದಿಂದ ಕಾನೂನಿನ ಕ್ರಮವನ್ನು ತೆಗೆದುಕೊಂಡಿಲ್ಲ ಎಂಬುವುದರ ಕುರಿತು ಸ್ಪಷ್ಟನೆ ನೀಡಿರುವುದಿಲ್ಲ. ಹಾಗಾಗಿ ವಾದಿಯು ನಿ.ಪಿ-3 ಕ್ರಯದ ಕರಾರು ಪತ್ರ

ವನ್ನು ಸೃಷ್ಟಿಸಿರುತ್ತಾರೆ ಎಂಬ ಪ್ರತಿವಾದಿಯರ ಪರ ಹೇಳಿಕೆಯನ್ನು ಪರಿಗಣಿಸಲು ಬರುವುದಿಲ್ಲ.

27. ಈ ಕುರಿತು ವಾದಿಯು ಹಾಜರುಪಡಿಸಿರುವ ಪಹಣಿ ಪತ್ರಿಕೆಗಳನ್ನು ಪರಿಶೀಲಿಸಿದಾಗ ದಾವಾ ಆಸ್ತಿಯ ಖಾತೆಯು ಮೊದಲಿಗೆ ಶ್ರೀಶೈಲ್ ತಂದೆ ಸೋಮಪ್ಪ ಮಾಲಗಾರಪರವರ ಹೆಸರಿಗೆ ನಮೂದು ಆಗಿದ್ದು, ತದ ನಂತರದಲ್ಲಿ ದಾವಾ ಆಸ್ತಿಯ ಖಾತೆಯು ರಮೇಶ ತಂದೆ ಮಲ್ಲಪ್ಪ ಚಿಂಚೋಳಿರವರ ಹೆಸರಿನಲ್ಲಿ ನಮೂದಾಗಿರುವುದು ನಿಪಿ-1 ಮತ್ತು 2 ರ ಪಹಣಿ ಪತ್ರಿಕೆಗಳಿಂದ ಕಂಡು ಬರುತ್ತದೆ. ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯು ನೊಂದಾಯಿತ ಕ್ರಯ ಕರಾರು ಪತ್ರದ ಮೂಲಕ ವಾದಿಗೆ ಮಾರಾಟ ಮಾಡಿ ದಾವಾ ಆಸ್ತಿಯ ಸ್ವಾಧೀನತೆಯನ್ನು ತಮ್ಮ ಹತ್ತಿರ ಇಟ್ಟುಕೊಂಡಿರುವುದು ನಿಪಿ.3 ರ ಕ್ರಯ ಕರಾರು ಪತ್ರದಿಂದ ಕಂಡು ಬರುತ್ತದೆ.

28. ಈ ಪ್ರಸ್ತುತ ದಾವೆಯಲ್ಲಿ 1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ವಾದಿಗೆ ಮಾರಾಟ ಮಾಡಿರುವುದಿಲ್ಲ ಮತ್ತು ವಾದಿ ಮತ್ತು 1 ನೇ ಪ್ರತಿವಾದಿಯು ಮಧ್ಯೆ ಆದ ವ್ಯವಹಾರವು ಹಣದ ವ್ಯವಹಾರವಾಗಿರುತ್ತದೆ ಎಂಬುದರ ಕುರಿತು ಪ್ರತಿವಾದಿಯರು ಯಾವುದೇ ಸಾಕ್ಷ್ಯಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅಲ್ಲದೆ 1 ನೇ ಪ್ರತಿವಾದಿಯು ವಾದಿಯಿಂದ ಯಾವಾಗ ಹಣವನ್ನು ಸಾಲವಾಗಿ ಪಡೆದಿರುತ್ತಾರೆ ಎಂಬುದರ ಕುರಿತು ಸಹ ನಿರ್ಧಿಷ್ಟವಾಗಿ ತಮ್ಮ ಪ್ರತಿವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ. ಹಾಗಾಗಿ ವಾದಿಯು ತನ್ನ ವಾದ ಪತ್ರದಲ್ಲಿ ಹೇಳಿರುವಂತೆ 1 ನೇ ಪ್ರತಿವಾದಿಯು ನಿ.ಪಿ.**3** ರ ಕ್ರಯ ಕರಾರು ಪತ್ರವನ್ನು ತನ್ನ ಪರವಾಗಿ ಜಾರಿ ಮಾಡಿಕೊಟ್ಟಿರುವುದನ್ನು ಕ್ರಯ ಕರಾರು ಪತ್ರದಲ್ಲಿ ನಮೂದಿಸಿರುವಂತೆ ರೂ.**3,00,000/-** ಹಣವನ್ನು ತಾನು 1 ನೇ ಪ್ರತಿವಾದಿಗೆ ಪಾವತಿಸಿರುತ್ತೇನೆ ಎಂಬುದನ್ನು ಸೂಕ್ತ ಹಾಗೂ ನ್ಯಾಯಾಲಯವು ನಂಬಬಹುದಾದ ಸಾಕ್ಷಾಧಾರಗಳ ಮೂಲಕ ರುಜುವಾತುಪಡಿಸಿರುತ್ತಾರೆ.

**29.** ವಾದಿಯು ಪ್ರಸ್ತುತ ಈ ಪ್ರಕರಣದಲ್ಲಿ ವಾದಿಗೆ ಮೋಸ ಮಾಡುವ ಉದ್ದೇಶದಿಂದ 1 ನೇ ಪ್ರತಿವಾದಿಯು ದಿ:07.04.2022 ರಂದು 2 ನೇ ಪ್ರತಿವಾದಿಯ ಪರವಾಗಿ ದಾವಾ ಆಸ್ತಿ ಸರ್ವೆ ನಂ: 141/3 ಕ್ಷೇತ್ರ 31 ಗುಂಟೆ ಒಟ್ಟು ಆಸ್ತಿಯ ಕುರಿತು ನೊಂದಾಯಿತ ಕ್ರಯ

ಪತ್ರವನ್ನು ಜಾರಿ ಮಾಡಿಕೊಟ್ಟಿರುತ್ತಾರೆ. ಹಾಗಾಗಿ ಸದರಿ ಕ್ರಯ ಪತ್ರವು ವಾದಿಗೆ ಬಂಧನಕಾರಕವಾಗುವುದಿಲ್ಲ ಎಂದು ಹೇಳಿರುತ್ತಾರೆ. ಇದಕ್ಕೆ ಪ್ರತಿಯಾಗಿ 1 ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ತಾನು 2 ನೇ ಪ್ರತಿವಾದಿಯ ಪರವಾಗಿ ನೊಂದಾಯಿತ ಕ್ರಯ ಪತ್ರವನ್ನು ದಿನಾಂಕ: 07.04.2022 ರಂದು ಜಾರಿ ಮಾಡಿಕೊಟ್ಟಿರುವ ಕುರಿತು ಹೇಳಿರುತ್ತಾರೆ. ಈ ದಾವೆಯಲ್ಲಿ 2 ನೇ ಪ್ರತಿವಾದಿಯು ನ್ಯಾಯಾಲಯಕ್ಕೆ ಹಾಜರಾಗಿ ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ.

30. ಈ ಕುರಿತು ವಾದಿಯು ಹಾಜರುಪಡಿಸಿರುವ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯವನ್ನು ಪರಿಶೀಲಿಸುವುದು ಅತ್ಯವಶ್ಯಕವಾಗಿರುತ್ತದೆ. ವಾದಿಯು ಹಾಜರುಪಡಿಸಿರುವ ನಿಶಾನೆ ಪಿ.1 ರ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಬಸವನ ಬಾಗೇವಾಡಿ ಗ್ರಾಮದ ಸರ್ವೆ ನಂ: 141/3 ವಿಸ್ತೀರ್ಣ 31 ಗುಂಟೆ ಜಮೀನಿನ ಖಾತೆಯು ಕ್ರಯ ಪತ್ರದ ಆಧಾರದ ಮೇಲೆ 2 ನೇ ಪ್ರತಿವಾದಿಯ ಹೆಸರಿಗೆ ನಮೂದಾಗಿರುವುದು ಕಂಡುಬರುತ್ತದೆ.

**31.** ಈ ಮೇಲಿನ ಉಭಯ ಪಕ್ಷಗಾರರ ವಾದ ಪತ್ರ, ಪ್ರತಿವಾದ ಪತ್ರ ಮತ್ತು ವಾದಿ ಪರ ಮೌಖಿಕ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ 1 ನೇ ಪ್ರತಿವಾದಿಯು ದಾವಾ ಆಸ್ತಿ ಸರ್ವೆ ನಂ: 141/3 ಕ್ಷೇತ್ರ 31 ಗುಂಟೆ ಜಮೀನನ್ನು 2 ನೇ ಪ್ರತಿವಾದಿಗೆ ನೊಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುವುದು ಕಂಡು ಬರುತ್ತದೆ. 1 ನೇ ಪ್ರತಿವಾದಿಯು ವಾದಿಯ ಪರವಾಗಿ ನಿಶಾನೆ ಪಿ.3 ರಂತೆ ಕ್ರಯ ಕರಾರು ಪತ್ರವನ್ನು ದಿನಾಂಕ 25.01.2021 ರಂದು ದಾವಾ ಆಸ್ತಿಯ ಕುರಿತು ಜಾರಿ ಮಾಡಿಕೊಟ್ಟಿದ್ದರೂ ಕೂಡ ದಾವಾ ಆಸ್ತಿಯನ್ನು ಸೇರಿಸಿ ದಿನಾಂಕ:07.04.2022 ರಂದು 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ಪರವಾಗಿ ನೊಂದಾಯಿತ ಕ್ರಯ ಪತ್ರವನ್ನು ಜಾರಿ ಮಾಡಿಕೊಟ್ಟಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. 1 ನೇ ಪ್ರತಿವಾದಿಯು ವಾದಿಯ ಪರವಾಗಿ ನಿಶಾನೆ ಪಿ.3 ರ ಕ್ರಯ ಕರಾರು ಪತ್ರವನ್ನು ಮೊದಲಿಗೆ ಜಾರಿ ಮಾಡಿಕೊಟ್ಟಿರುವುದರಿಂದ ಮತ್ತು ಸದರಿ ನಿಶಾನೆ ಪಿ. 3 ರ ಕ್ರಯ ಕರಾರು ಪತ್ರವನ್ನು ರದ್ದು ಮಾಡದೇ 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ಪರವಾಗಿ ಕ್ರಯ ಪತ್ರವನ್ನು ಜಾರಿ ಮಾಡಿಕೊಟ್ಟಿರುವುದರಿಂದ 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ಪರವಾಗಿ ಜಾರಿ ಮಾಡಿಕೊಟ್ಟಿರುವ ಕ್ರಯ ಪತ್ರವು ವಾದಿಯು ಖರೀದಿಸಿರುವ

ಆಸ್ತಿಗೆ ಸಂಬಂಧಿಸಿದಂತೆ ಮಾತ್ರ ಬಂಧನಕಾರಕ ವಾಗುವುದಿಲ್ಲ ಎಂದು ಈ ನ್ಯಾಯಾಲಯವು ನಿರ್ಣಯಕ್ಕೆ ಬರುತ್ತದೆ.

**32**. ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ನಿಶಾನೆ ಪಿ.3 ರಂತೆ 1 ನೇ ಪ್ರತಿವಾದಿಯು ವಾದಿಯಿಂದ ದಿನಾಂಕ:25.01.2021 ರಂದು ಒಟ್ಟು ಪ್ರತಿಫಲದ ಮೊತ್ತವಾದ ರೂ.5,00,000/- ಹಣದ ಪೈಕಿ ಮುಂಗಡವಾಗಿ ರೂ.3,00,000/- ಹಣವನ್ನು ನಗದಾಗಿ ಪಡೆದುಕೊಂಡು ವಾದಿಯ ಪರವಾಗಿ ಕ್ರಯದ ಕರಾರು ಪತ್ರವನ್ನು ಜಾರಿ ಮಾಡಿಕೊಟ್ಟಿರುತ್ತಾರೆ ಎಂಬುದನ್ನು ವಾದಿಯು ರುಜುವಾತುಪಡಿಸಿರುತ್ತಾರೆ. ಅಂತೆಯೇ 1 ನೇ ಪ್ರತಿವಾದಿಯು ತಾನು ವಾದಿಯ ಪರವಾಗಿ ನಿಶಾನೆ ಪಿ.3 ರ ಕ್ರಯ ಕರಾರು ಪತ್ರವನ್ನು ರೂ:40,000/- ಹಣದ ಭದ್ರತೆಗಾಗಿ ಜಾರಿ ಮಾಡಿಕೊಟ್ಟಿರುತ್ತದೆ ಎಂಬುದನ್ನು ರುಜುವಾತುಪಡಿಸಲು ವಿಫಲರಾಗಿದ್ದಾರೆಂದು ನ್ಯಾಯಾಲಯವು ನಿರ್ಣಯಕ್ಕೆ ಬರುತ್ತದೆ. ಆದ್ದರಿಂದ ವಿವಾದಾಂಶ **1** ಮತ್ತು **2** ನ್ನು ಸಕಾರಾತ್ಮಕ ಎಂದು ನಿರ್ಣಯಿಸಲಾಗಿದೆ**.**

**33**. ವಿವಾದಾಂಶ ಸಂಖ್ಯೆ **3:-** ವಾದಿಯು ತನ್ನ ವಾದಪತ್ರದಲ್ಲಿ 1 ನೇ ಪ್ರತಿವಾದಿಯು ಒಟ್ಟು ಪ್ರತಿಫಲದ ಮೊತ್ತದ ಹಣ ರೂ.5,00,000/- ರ ಪೈಕಿ ರೂ.3,00,000/- ಮುಂಗಡ ಹಣವನ್ನು ಪಡೆದುಕೊಂಡು ಅದೇ ದಿನ ಕ್ರಯದ ಕರಾರು ಪತ್ರವನ್ನು ಜಾರಿಗೊಳಿಸಿಕೊಟ್ಟಿರುತ್ತಾರೆ. ಕ್ರಯ ಕರಾರು ಪತ್ರದ ಉಳಿದ ಪ್ರತಿಫಲದ ರೂ.2,00,000/- ಹಣವನ್ನು ಪಡೆದುಕೊಂಡು ಶುದ್ಧ ಕ್ರಯ ಪತ್ರವನ್ನು ಜಾರಿ ಮಾಡಿಕೊಡಲು ವಾದಿಯು ಮೌಖಿಕವಾಗಿ ಹಲವು ಬಾರಿ 1 ನೇ ಪ್ರತಿವಾದಿಗೆ ಕೇಳಿರುತ್ತಾರೆ. ಆದರೆ, 1 ನೇ ಪ್ರತಿವಾದಿಯು ಒಂದಲ್ಲಾ ಒಂದು ಕಾರಣದಿಂದ ಕ್ರಯ ಪತ್ರವನ್ನು ನೊಂದಣಿ ಮಾಡಿಸಿಕೊಡಲು ಮುಂದೂಡುತ್ತಾ ಬಂದಿರುತ್ತಾರೆ. ಈ ಮಧ್ಯ 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ಪರವಾಗಿ ದಿನಾಂಕ 07.04.2022 ರಂದು ಕ್ರಯ ಪತ್ರವನ್ನು ಜಾರಿ ಮಾಡಿಕೊಟ್ಟಿರುತ್ತಾರೆ. ವಾದಿಯು ಕ್ರಯಪತ್ರವನ್ನು ಜಾರಿಗೊಳಿಸುವ ತನ್ನ ಪಾಲಿನ ಕರ್ತವ್ಯವನ್ನು ನೆರವೇರಿಸಲು ಸದಾಕಾಲ ಸಿದ್ದನಿರುತ್ತಾನೆ. ವಾದಿಯ ಕರಾರಿನಲ್ಲಿನ ತನ್ನ ಪಾಲಿನ ಕರ್ತವ್ಯವನ್ನು ನೆರವೇರಿಸಲು ಯಾವುದೇ ಉಲ್ಲಂಘನೆಯನ್ನು ಮಾಡಿರುವುದಿಲ್ಲ ಎಂದು ಹೇಳಿರುತ್ತಾರೆ.

**34**. ಈ ವಿವಾದಾಂಶದ ಕುರಿತು 1 ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ವಾದಿಯು ತಮ್ಮ ವಾದ ಪತ್ರದಲ್ಲಿ ಹೇಳಿರುವ ಎಲ್ಲಾ ಅಂಶಗಳನ್ನು ನಿರ್ದಿಷ್ಟವಾಗಿ ಅಲ್ಲಗಳೆದಿರುತ್ತಾರೆ. ಈ ವಿವಾದಾಂಶದ ಕುರಿತು ವಾದಿಯು ನಿ.ಪಿ-3 ರ ಕ್ರಯ ಕರಾರು ಪತ್ರದ ಪ್ರಕಾರ ಕ್ರಯ ಪತ್ರವನ್ನು ಜಾರಿಗೊಳಿಸುವಿಕೆಯ ಕುರಿತು ಪ್ರತಿವಾದಿಯರನ್ನು ಮೌಖಿಕವಾಗಿ ಕೇಳಿರುವುದಾಗಿ ತನ್ನ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ.

**35.** ಈ ಕುರಿತು ಪಿ.ಡಬ್ಲ್ಯೂ .1 ರಿಂದ ಪಿ.ಡಬ್ಲ್ಯೂ .3 ರವರ ಪಾಟೀ ಸವಾಲನ್ನು 1 ನೇ ಪ್ರತಿವಾದಿಯ ಪರ ವಕೀಲರು ಮಾಡಿ ತಮ್ಮ ಪರವಾಗಿ ಯಾವುದೇ ಒಪ್ಪಿತ ಹೇಳಿಕೆಯನ್ನು ಪಡೆದಿರುವುದಿಲ್ಲ. ಅದೇ ರೀತಿಯಾಗಿ 1 ಮತ್ತು 2 ನೇ ಪ್ರತಿವಾದಿಯರು ತಮ್ಮ ಪರವಾಗಿ ಯಾವುದೇ ಸಾಕ್ಷ್ಯವನ್ನು ಸಹ ಹಾಜರುಪಡಿಸಿರುವುದಿಲ್ಲ.ಈ ಕುರಿತು ನಿಶಾನೆ.ಪಿ.3 ರ ಕ್ರಯ ಕರಾರು ಪತ್ರದಲ್ಲಿ " ಇನ್ನುಳಿದ ಕ್ರಯ ಧನ ಮೊತ್ತ ರೂ.2,00,000/- ಹಣವನ್ನು ಮೂರು ವರ್ಷಗಳ ಒಳಗಾಗಿ ಪಡೆದುಕೊಂಡು ನೀವು ಕರೆದಾಗ ಬಂದು ಖರೀದಿ ಪತ್ರವನ್ನು ಮಾಡಿ ಕೊಡುತ್ತೇನೆ. ಸದರಿ ಆಸ್ತಿಯ ಮೇಲೆ ಯಾವುದೇ ಲೋನ್, ತೆರಿಗೆ, ಬಾಕಿ ಇದ್ದರೆ ನಾವೇ ಕ್ಲಿಯರೆನ್ಸ್ ಮಾಡಿಸಿಕೊಡುತ್ತೇವೆ. ಮುಂದೆ ಷೆಡ್ಯೂಲ್ ಆಸ್ತಿಯ ಕುರಿತು ಯಾರಿಂದಲಾದರೂ ತಂಟೆ, ತಕರಾರುಗಳು ಬಂದಲ್ಲಿ, ನಾವು ನಮ್ಮ ಸ್ವಂತ ಖರ್ಚಿನಿಂದ ಸದರಿ ಆಸ್ತಿಯ ಹಕ್ಕು ನಿಮಗೆ ಸ್ಥಿರಪಡಿಸಿಕೊಡುತ್ತೇವೆ ಎಂದು ನಮೂದಿರುವುದು ಕಂಡು ಬರುತ್ತದೆ.

**36** ಪಿಡಬ್ಲ್ಯೂ-1 ರವರು ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ವಾದಿಯು ಮೌಖಿಕವಾಗಿ ಹಲವು ಬಾರಿ ನೊಂದಣಿ ಕ್ರಯಪತ್ರವನ್ನು ಜಾರಿ ಗೊಳಿಸುವಂತೆ 1 ನೇ ಪ್ರತಿವಾದಿಗೆ ಕೇಳಿರುತ್ತೇನೆ. ಆದರೆ 1 ನೇ ಪ್ರತಿವಾದಿಯು ಒಂದಲ್ಲಾ ಒಂದು ಕಾರಣದಿಂದ ಕ್ರಯ ಪತ್ರವನ್ನು ನೊಂದಣಿ ಮಾಡಿಕೊಡಲು ಮುಂದೂಡುತ್ತಾ ಬಂದಿರುತ್ತಾರೆ. ವಾದಿಯು ಕ್ರಯಪತ್ರವನ್ನು ಜಾರಿಗೊಳಿಸುವ ತನ್ನ ಪಾಲಿನ ಕರ್ತವ್ಯವನ್ನು ನೆರವೇರಿಸಲು ಸದಾಕಾಲ ಸಿದ್ದನಿರುತ್ತಾನೆ. ವಾದಿಯ ಕರಾರಿನಲ್ಲಿನ ತನ್ನ ಪಾಲಿನ ಕರ್ತವ್ಯವನ್ನು ನೆರವೇರಿಸಲು ಯಾವುದೇ ಉಲ್ಲಂಘನೆಯನ್ನು

ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಈ ಅಂಶದ ಕುರಿತು ಪ್ರತಿವಾದಿಯರ ಪರ ವಕೀಲರು ಪಿ.ಡಬ್ಲ್ಯೂ1 ರವರ ಪಾಟೀ ಸವಾಲಿನಲ್ಲಿ ಪ್ರಶ್ನೆಗಳನ್ನು ಸೂಚಿಸಿ ನಿರ್ಧಿಷ್ಟವಾಗಿ ಅಲ್ಲಗಳೆದಿರುವುದಿಲ್ಲ. ಹಾಗಾಗಿ ಪಿ.ಡಬ್ಲ್ಯೂ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ವಾದಿಯು ಕ್ರಯಪತ್ರವನ್ನು ಜಾರಿಗೊಳಿಸುವ ತನ್ನ ಪಾಲಿನ ಕರ್ತವ್ಯವನ್ನು ನೆರವೇರಿಸಲು ಸದಾಕಾಲ ಸಿದ್ದನಿರುತ್ತಾನೆ ಹಾಗೂ ವಾದಿಯ ಕರಾರಿನಲ್ಲಿನ ತನ್ನ ಪಾಲಿನ ಕರ್ತವ್ಯವನ್ನು ನೆರವೇರಿಸಲು ಯಾವುದೇ ಉಲ್ಲಂಘನೆಯನ್ನು ಮಾಡಿರುವುದಿಲ್ಲ ಎಂಬ ಅಂಶವು ಸರಿ ಇರುತ್ತದೆ ಎಂದು ಒಪ್ಪಿ ಕೊಂಡಿರುತ್ತಾರೆ ಎಂದು ಭಾವಿಸಬೇಕಾಗುತ್ತದೆ.

**37.** ಉಭಯ ಪಕ್ಷಗಾರರ ಹೇಳಿಕೆಗಳು ಮತ್ತು ಸಾಕ್ಷವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ವಿಶ್ಲೇಷಿಸಲಾಗಿ ವಾದಿಯು ಪ್ರಸ್ತುತ ಈ ಪ್ರಕರಣದಲ್ಲಿ ಕ್ರಯದ ಕರಾರಿನ ಕುರಿತ ಒಟ್ಟು ಪ್ರತಿಫಲದ ಮೊತ್ತವಾದ ರೂ.5,00,000/- ಹಣದ ಪೈಕಿ ರೂ.3,00,000/- ಹಣವನ್ನು ಈಗಾಗಲೇ ಪಾವತಿಸಿರುವುದು ವಿವಾದಾಂಶ 1 ರಂತೆ ರುಜುವಾತಾಗಿರುತ್ತದೆ. ಅಂತೆಯೇ ವಾದಿಯು ಒಟ್ಟು ಪ್ರತಿಫಲದ ಮೊತ್ತವಾದ ರೂ.5,00,000/- ಹಣದ ಪೈಕಿ ರೂ.3,00,000/- ಹಣವನ್ನು ತಾನು ಪಾವತಿಸಿರುತ್ತೇನೆ ಹಾಗೂ ತಾನು ತನ್ನ ಪಾಲಿನ ಕರಾರನ್ನು ನೆರವೇರಿಸಲು ಸದಾ ಸಿದ್ದನಿರುವುದಾಗಿ ವಾದಿಯ ಪರ ವಕೀಲರು ವಾದ ಮಂಡನೆಯ ಸಮಯದಲ್ಲಿ ತಿಳಿಸಿರುತ್ತಾರೆ. ಆದ್ದರಿಂದ ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ ವಾದಿಯು ನಿಶಾನೆ.ಪಿ.3 ರಂತೆ ಕರಾರಿನ ತನ್ನ ಪಾಲಿನ ಕರ್ತವ್ಯವನ್ನು ನೆರವೇರಿಸಲು ಸದಾ ಸಿದ್ದನು ಹಾಗೂ ವಾದಿಯು ಪ್ರತಿವಾದಿಗಳಿಗೆ ಹಲವಾರು ಬಾರಿ ಮೌಖಿಕವಾಗಿ ಕೇಳಿದಾಗ್ಯೂ ಕೂಡ ಪ್ರತಿವಾದಿಗಳು ತಮ್ಮ ಪಾಲಿನ ಕರಾರಿನಂತೆ ಕರ್ತವ್ಯವನ್ನು ನೇರವೇರಿಸಲು ವಿಫಲರಾಗಿರುತ್ತಾರೆ ಎಂಬುದನ್ನು ವಾದಿಯು ರುಜುವಾತುಪಡಿಸಿರುತ್ತಾರೆ ಎಂದು ಈ ನ್ಯಾಯಾಲಯವು ನಿರ್ಣಯಕ್ಕೆ ಬರುತ್ತದೆ. ಆದ್ದರಿಂದ ವಿವಾದಾಂಶ ಸಂಖ್ಯೆ-**3** ನ್ನು ಸಕಾರಾತ್ಮಕ ಎಂದು ನಿರ್ಣಯಿಸಲಾಗಿರುತ್ತದೆ.

**38.** <u>ವಿವಾದಾಂಶ ಸಂಖ್ಯೆ- 4:-</u> ವಾದಿಯು ಪ್ರಸ್ತುತ ಈ ಪ್ರಕರಣವನ್ನು ದಿ:25.01.2021 ರಂದು 1 ನೇ ಪ್ರತಿವಾದಿಯು ಮಾಡಿಕೊಟ್ಟಿರುವ ಕ್ರಯದ ಕರಾರಿನಂತೆ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ನೊಂದಣಿ ಕ್ರಯಪತ್ರವನ್ನು ಪ್ರತಿವಾದಿಗಳು ವಾದಿಯ ಪರವಾಗಿ ಜಾರಿ ಮಾಡಿಕೊಡುವಂತೆ ನಿರ್ದೇಶಿಸಬೇಕೆಂದು, ವಾದಿಗೆ ದಾವಾ ಆಸ್ತಿಯ ಸ್ವಾಧೀನತೆಯನ್ನು ವಹಿಸಿಕೊಡುವಂತೆ ಹಾಗೂ ಪರ್ಯಾಯವಾಗಿ 1 ನೇ ಪ್ರತಿವಾದಿಯು ವಾದಿಯಿಂದ ಮುಂಗಡವಾಗಿ ಪಡೆದ ರೂ:3,00,000/- ಹಣವನ್ನು ವಾರ್ಷಿಕ 18% ಬಡ್ಡಿಯೊಂದಿಗೆ 1 ನೇ ಪ್ರತಿವಾದಿಯು ವಾದಿಗೆ ಮರು ಪಾವತಿಸುವಂತೆ ನಿರ್ದೇಶಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ. ಇದಕ್ಕೆ ಪ್ರತಿಯಾಗಿ ಪ್ರತಿವಾದಿಗಳು ವಾದಿಯು ಈ ದಾವೆಯಲ್ಲಿ ಕೋರಿರುವ ಯಾವುದೇ ಪರಿಹಾರಗಳನ್ನು ಪಡೆಯಲು ಅರ್ಹರಾಗದೇ ಇರುವುದರಿಂದ ವಾದಿಯು ಸಲ್ಲಿಸಿರುವ ದಾವೆಯನ್ನು ಖರ್ಚಿನೊಂದಿಗೆ ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

**39**. ಈ ಪ್ರಕರಣದಲ್ಲಿ ಈಗಾಗಲೇ ವಿವಾದಾಂಶ ಸಂಖ್ಯೆ-1 ರಿಂದ 3 ಗಳನ್ನು ಸಕಾರಾತ್ಮಕ ಎಂದು ನಿರ್ಣಯಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ, ಯಾವುದೇ ಒಂದು ನಿರ್ಧಿಷ್ಟ ಕರಾರಿನ ಪಾಲನೆಗೆ ಡಿಕ್ರಿಯನ್ನು ಮಾಡುವಂತಹ ಸಂದರ್ಭದಲ್ಲಿ ನ್ಯಾಯಾಲಯವು ವಿವೇಚನಾತ್ಮಕವಾಗಿ, ನ್ಯಾಯಯುತ ಮತ್ತು ಯುಕ್ತ ಕಾನೂನಿನ ಅಡಿಯಲ್ಲಿ ಪಕ್ಷಗಾರರ ಪರವಾಗಿ ಪೂರ್ವಭಾವನೆಯನ್ನು ಹೊಂದಬೇಕಾಗುತ್ತದೆ.

40. ನಿರ್ಧಿಷ್ಟ ಪರಿಹಾರ ಅಧಿನಿಯಮ 1963 ರ ಕಲಂ 20 ರಲ್ಲಿನ ವಿವೇಚನ ಅಧಿಕಾರವನ್ನು ಯಾವ ರೀತಿಯಾಗಿ ವಿನಿಯೋಗಿಸಬೇಕು ಎಂಬುವುದರ ಕುರಿತಾಗಿ ಈ ನ್ಯಾಯಾಲಯವು ಈ ಕೆಳಕಂಡ ತೀರ್ಪು ಜನ್ಯೆಗಳನ್ನು ಉಲ್ಲೇಖಿಸುತ್ತದೆ.

***1) 2008(4) KCCR 2374 Silvey and other V/s. Arun Vargheses and another.:_***

***Decree for Specific performance- Whether conduct of the defendant relevant in exercising the discretion for the grant or refusal of the decree for specific performance-Held, Yes. The conduct of the defendant cannot be ignored while weighing the question of exercise of discretion for decreeing or denying a decree for specific performance. In the present case, the High Court had clearly observed that, the defendant was not ready and willing to perform his part of the obligation under the contract. Held, appeal was without merit.***

***2) AIR 2015 SUPREME COURT 580 Zarina Siddiqui V/s. Ramalingam alias R. Amarnathan:-***

***Relief of specific performance-Is discretionary relief-Conduct of parties- Relevant consideration for granting or refusing specific performance-Defendant making false statements denying execution of agreement and with holding evidence-Not entitled to ask court to exercise discretion in his favour and refuse specific performance.***

**41.** ಮಾನ್ಯ ವಾದಿಯ ಪರ ವಕೀಲರು ತಮ್ಮ ವಾದ ಮಂಡನೆಗೆ ಪೂರಕವಾಗಿ ಈ ಕೆಳಗಿನ ಮಾನ್ಯ ಸರ್ವೋಚ್ಚ ಹಾಗೂ ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ಈ ಕೆಳಗಿನ ತೀರ್ಪುಗಳನ್ನು ಉಲ್ಲೇಖಿಸಿರುತ್ತಾರೆ.

***1) AIR 2007 (3) KANT LJ 472***

***Manasa Housing Co-operative Society Vs Marikellalah S/o Late B.L***

***2) RSA No.4132/2012(SP)***

***Maruti S/o Fakirappa Chivagol Vs Shri. Shrishailappa S/o Channappa Metgud and others***

***3)RFA No.4132/2012***

***Maruti Vs Shrishailappa and others.***

ಈ ಮೇಲ್ಕಂಡ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪು ಜನ್ಯಗಳನ್ನು ಪರಿಶೀಲಿಸಲಾಗಿ, ನಿರ್ಧಿಷ್ಟ ಕರಾರಿನ ಅಧಿನಿಯಮ ಕಲಂ ***20*** ರ ಅಡಿಯಲ್ಲಿ ವಿವೇಚನಾ ಅಧಿಕಾರವನ್ನು ಉಪಯೋಗಿಸುವ ಸಮಯದಲ್ಲಿ ಉಭಯ ಪಕ್ಷಗಾರರ ನಡೆಯನ್ನು ಪರಿಗಣಿಸಬೇಕೆಂದು, ನಿರ್ಧಿಷ್ಟ ಪರಿಹಾರವನ್ನು ಮಂಜೂರುಗೊಳಿಸುವ ಅಥವಾ ನಿರಾಕರಿಸುವ ಸಮಯದಲ್ಲಿ ಉಭಯ ಪಕ್ಷಗಾರರ ನಡವಳಿಯ ಅಂಶಗಳು ಮುಖ್ಯವಾಗಿರುತ್ತವೆ ಎಂಬುದನ್ನು ಉಲ್ಲೇಖಿಸುತ್ತದೆ. ಅಂತೆಯೇ ಮೇಲ್ಕಂಡ ತೀರ್ಪಿನಲ್ಲಿ ಪ್ರತಿವಾದಿಯರು ನ್ಯಾಯಾಲಯದ ಮುಂದೆ ಇರುವ ಕ್ರಯದ ಕರಾರನ್ನು ಜಾರಿಗೊಳಿಸಿರುವುದನ್ನು ನಿರಾಕರಿಸಿದ್ದು, ಅಂತೆಯೇ ಸಾಕ್ಷಿಯನ್ನು ತಡೆ ಹಿಡಿದಂತಹ ಸಮಯದಲ್ಲಿ ಸದರಿ ಕಲಂ ***20*** ರ ವಿವೇಚನಾ ಅಧಿಕಾರವನ್ನು ತನ್ನ ಪರವಾಗಿ ಪ್ರತಿವಾದಿ ಕೋರಲು ಬರುವುದಿಲ್ಲವೆಂದು ನಿರ್ಣಯಿಸಿರುತ್ತದೆ.

***42.*** ಈ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ, ಪ್ರಸ್ತುತ ಈ ಪ್ರಕರಣದಲ್ಲಿ ***1*** ನೇ ಪ್ರತಿವಾದಿಯು ನಿಶಾನೆ.ಪಿ.***3*** ರಂತೆ ವಾದಿಗೆ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿಲ್ಲವೆಂದು, ಬದಲಾಗಿ ರೂ:***40,000*** ಹಣದ ಭದ್ರತೆಗಾಗಿ ನಿಶಾನೆ.ಪಿ.***3*** ರ ಕ್ರಯದ ಕರಾರುಪತ್ರವನ್ನು ತಾನು ವಾದಿಗೆ ಬರೆದುಕೊಟ್ಟಿರುತ್ತೇನೆ ಎಂದು ಹೇಳಿರುತ್ತಾರೆ. ಆದರೆ ಈ ಕುರಿತು ತಮ್ಮ ನಿಲುವನ್ನು ರುಜುವಾತುಪಡಿಸಲು ಪ್ರತಿವಾದಿಗಳು ವಿಫಲರಾಗಿರುತ್ತಾರೆ.

***43.*** ಈ ಪ್ರಕರಣದ ಪ್ರತಿವಾದಿಗಳು ತಮ್ಮ ಪ್ರತಿವಾದಪತ್ರದಲ್ಲಿ ***1*** ನೇ ಪ್ರತಿವಾದಿಯು ಕ್ರಯದ ಕರಾರು ಪತ್ರವನ್ನು ಜಾರಿಗೊಳಿಸಿಲ್ಲ. ಬದಲಿಗೆ ರೂ:***40,000*** ಹಣದ ಭದ್ರತೆಗಾಗಿ ನಿಶಾನೆ.ಪಿ.***3*** ರ ಕ್ರಯದ ಕರಾರು ಪತ್ರವನ್ನು ತಾನು ವಾದಿಗೆ ಬರೆದು ಕೊಟ್ಟಿರುತ್ತೇನೆ ಎಂದು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. ಆದರೆ ಪ್ರತಿವಾದಿಗಳು ತಾವು ತೆಗೆದುಕೊಂಡ ಪ್ರತಿವಾದವನ್ನು ರುಜುವಾತುಪಡಿಸಲು ವಿಫಲರಾಗಿರುತ್ತಾರೆ. ಆದ್ದರಿಂದ ಈ ಮೇಲ್ಕಂಡ ಪ್ರಕರಣಗಳ ತೀರ್ಪಿನ ಅನುಪಾತವು ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸುತ್ತದೆ ಎಂದು ನ್ಯಾಯಾಲಯ ತೀರ್ಮಾನಕ್ಕೆ ಬಂದು ನಿರ್ದಿಷ್ಟ ಕರಾರಿನ ಅಧಿನಿಯಮ ಕಲಂ ***20*** ರ ಅಡಿಯಲ್ಲಿ ವಿವೇಚನಾ ಅಧಿಕಾರವನ್ನು ಪಡೆಯಲು ಪ್ರತಿವಾದಿಯರು ಅರ್ಹರಲ್ಲವೆಂದು ಬದಲಾಗಿ ಸದರಿ ವಿವೇಚನಾ ಅಧಿಕಾರವನ್ನು ವಾದಿಯು ತನ್ನ ಪರವಾಗಿ ಪಡೆಯಲು ಅರ್ಹರಿರುತ್ತಾರೆಂದು ನ್ಯಾಯಾಲಯವು ನಿರ್ಣಯಕ್ಕೆ ಬರುತ್ತದೆ.

***44.*** ಆದ್ದರಿಂದ, ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ ***1*** ನೇ ಪ್ರತಿವಾದಿಯು ನಿ.ಪಿ.***3*** ರ ಕ್ರಯ ಕರಾರು ಪತ್ರದಂತೆ ರೂ. ***3,00,000/-***ಹಣವನ್ನು ಮುಂಗಡವಾಗಿ ಪಡೆದು ಕ್ರಯ ಕರಾರು ಪತ್ರವನ್ನು ಜಾರಿ ಮಾಡಿಕೊಟ್ಟಿದ್ದಾಗ್ಯೂ ಸಹ ***1*** ನೇ ಪ್ರತಿವಾದಿಯು ನಿಶಾನೆ.ಪಿ.***3*** ರಂತೆ ಕ್ರಯ ಕರಾರು ಪತ್ರವನ್ನು ವಾದಿಯ ಪರವಾಗಿ ***1*** ನೇ ಪ್ರತಿವಾದಿಯು ಜಾರಿ ಮಾಡಿಕೊಟ್ಟಿಲ್ಲ ಎಂದು ಹೇಳಿರುವುದು ಪ್ರತಿವಾದಿಯರು ಸ್ವಚ್ಛ ಮನಸ್ಸಿನಿಂದ ನ್ಯಾಯಾಲಯದಲ್ಲಿ ಹಾಜರಾಗಿರುವುದಿಲ್ಲ ಎಂದು ಕಂಡುಬರುತ್ತದೆ. ಅಂತೆಯೇ, ***1*** ನೇ ಪ್ರತಿವಾದಿಯು ತಾವು ತೆಗೆದುಕೊಂಡ ನಿಲುವುಗಳನ್ನು ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿರುವುದು ಕಂಡುಬರುತ್ತದೆ. ವಾದಿಯು ಸುಮಾರು ***05*** ವರ್ಷಗಳ ಹಿಂದೆ ರೂ.***3,00,000/-*** ಹಣವನ್ನು ಪಾವತಿಸಿದ್ದು ಪ್ರಸ್ತುತ ನಿರ್ಧಿಷ್ಟ ನೆರವೇರಿಕೆಯ ಪರಿಹಾರವನ್ನು ನೀಡದಿದ್ದಲ್ಲಿ ವಾದಿಗೆ

ಹಾನಿಯುಂಟಾಗುತ್ತದೆ ಎಂದು ನ್ಯಾಯಾಲಯವು ತೀರ್ಮಾನಕ್ಕೆ ಬರುತ್ತದೆ. ಆದ್ದರಿಂದ, ವಾದಿಯು ಈ ದಾವೆಯಲ್ಲಿ ಕೋರಿರುವಂತೆ ದಿ:***25-01-2021*** ರ ಕ್ರಯದ ಕರಾರಿನ ಕುರಿತು ನಿರ್ದಿಷ್ಟ ನೆರವೇರಿಕೆಯ ಪರಿಹಾರವನ್ನು ಪಡೆಯಲು ಅರ್ಹರಿರುತ್ತಾರೆ ಮತ್ತು ವಾದಿಯು ದಾವಾ ಆಸ್ತಿಯ ಸ್ವಾಧೀನತೆಯನ್ನು ಕಾನೂನಿನ ಪ್ರಕ್ರಿಯೆ ಮೂಲಕ ಪಡೆಯಲು ಅರ್ಹರಿರುತ್ತಾರೆ. ವಾದಿಯು ಈ ದಾವೆಯಲ್ಲಿ ಕರಾರಿನ ನಿರ್ದಿಷ್ಟ ನೇರವೇರಿಕೆಯ ಪರಿಹಾರವನ್ನು ಪಡೆಯಲು ಅರ್ಹರಾಗಿರುವುದರಿಂದ ವಾದಿಯು ***1*** ನೇ ಪ್ರತಿವಾದಿಯಿಂದ ಮುಂಗಡ ಹಣವಾದ ರೂ: ***300000*** ಹಣವನ್ನು ಮರುಪಾವಾತಿಸುವ ಪ್ರಶ್ನೆಯೆ ಉದ್ಭವಿಸುವುದಿಲ್ಲ. ಆದ್ದರಿಂದ ವಿವಾದಾಂಶ ಸಂಖೆ***-4*** ನ್ನು ಭಾಗಶಃ ಸಕಾರಾತ್ಮಕ ಎಂದು ನಿರ್ಣಯಿಸಲಾಗಿರುತ್ತದೆ.

45. <u>ವಿವಾದಾಂಶ ಸಂಖ್ಯೆ***-5-***</u> ಈ ಮೇಲ್ಕಂಡ ಎಲ್ಲಾ ವಿವಾದಾಂಶಗಳನ್ನು ನಿರ್ಣಯಿಸಲಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

<u>ಆದೇಶ</u>

ವಾದಿಯು ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಲಾಗಿದೆ.

ವಾದಿಯು ದಿ:25-01-2021 ರ ಕ್ರಯದ ಕರಾರಿನ ಕುರಿತು ನಿರ್ದಿಷ್ಟ ನೆರವೇರಿಕೆಯ ಪರಿಹಾರವನ್ನು ಪಡೆಯಲು ಅರ್ಹರಿರುತ್ತಾರೆ.

ಪ್ರತಿವಾದಿಯರು ವಾದಿಯಿಂದ ರೂ.2,00,000 ಹಣವನ್ನು ಪಡೆದು ನೊಂದಾಯಿತ ಕ್ರಯ ಪತ್ರವನ್ನು ಈ ಆದೇಶವಾದ ದಿನಾಂಕದಿಂದ 3 ತಿಂಗಳ ಒಳಗಾಗಿ ವಾದಿಯ ಪರವಾಗಿ ಜಾರಿ ಮಾಡಿಕೊಡಲು ಈ ಮೂಲಕ ಆದೇಶಿಸಲಾಗಿದೆ. ಒಂದು ವೇಳೆ ಪ್ರತಿವಾದಿಯರು ಕ್ರಯ ಪತ್ರವನ್ನು ಜಾರಿ ಮಾಡಿಕೊಡಲು ವಿಫಲರಾದರೆ ವಾದಿಯು ಕಾನೂನು ಪ್ರಕ್ರಿಯೆಯ ಮೂಲಕ ನೊಂದಾಯಿತ ಕ್ರಯ ಪತ್ರವನ್ನು ಮಾಡಿಕೊಳ್ಳಬಹುದಾಗಿರುತ್ತದೆ.

 ಅಸಲು ದಾವಾ ಸಂಖ್ಯೆ: 332/2022

ವಾದಿಯು ದಾವಾ ಆಸ್ತಿಯ ಸ್ವಾಧೀನತೆಯನ್ನು ಕಾನೂನು ಪ್ರಕ್ರಿಯೆಯ ಮೂಲಕ ಪಡೆಯಲು ಅರ್ಹರಾಗಿರುತ್ತಾರೆ.

ಈ ಮೇಲ್ಕಂಡಂತೆ ಡಿಕ್ರಿ ಬರೆಯತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 27 ನೇ ಜೂನ 2026 ರಂದು ನಾನು ಉದ್ಘೋಷಿಸಿದ್ದೇನೆ.)

(ಈರಪ್ಪ ಢವಳೇಶ್ವರ್)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ, ಬಸವನ ಬಾಗೇವಾಡಿ

.

<u>ಅನುಬಂಧ</u>

<u>ವಾದಿಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:-</u>

ಪಿ.ಡಬ್ಲೂ.1 - ಶಂಕರ ತಂದೆ ಭೀಮಶಿ ಭಜಂತ್ರಿ
ಪಿ.ಡಬ್ಲೂ.2 - ಶಿವರಾಜ ತಂದೆ ಬಸವರಾಜ ಭಜಂತ್ರಿ
ಪಿ.ಡಬ್ಲೂ.3 -ಪಾರ್ಶ್ವನಾಥ ತಂದೆ ಬುಜಪ್ಪ ಹೊಸಮನಿ

<u>ವಾದಿಯ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-</u>

ನಿ.ಪಿ.1-2 - ಪಹಣಿ ಪತ್ರಿಕೆಗಳು
ನಿ.ಪಿ.3 - ಕಬ್ಜಾ ರಹಿತ ಖರೀದಿ ಕರಾರು ಪತ್ರ
ನಿ.ಪಿ.4 - ಮ್ಯುಟೇಶನ ರಜಿಸ್ಟರ ಪ್ರತಿ

<u>ಪ್ರತಿವಾದಿಯರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:-</u>

ಇಲ್ಲಾ

<u>ಪ್ರತಿವಾದಿಯರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-</u>

ಇಲ್ಲಾ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ, ಬಸವನ ಬಾಗೇವಾಡಿ